# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026


ಸಂಪುಟ:03 • ಸಂಚಿಕೆ: 09 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 01.07.2025 • ಮಂಗಳವಾರ • ಪುಟ:04 • ಬೆಲೆ:2
Volume:03 • Issue: 09 • PRGI No:KARKAN/2023/88055 • VIJAYANAGARA • 01.07.2025 • Tuesday • Page:04 • Rs:2



Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"

Call:9448633038/email:hampitimes@gmail.com


## ಆನಂದ ಬಾಣ




## ಪ್ರಧಾನಮಂತ್ರಿ ಅವಾಸ್ ಯೋಜನೆಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ತಾಲೂಕಿನ ಹಗರಿಬೊಮ್ಮನಹಳ್ಳಿ ಪುರಸಭೆ ವ್ಯಾಪ್ತಿಯ ಸಾರ್ವಜನಿಕರಿಗೆ 2025–26 ನೇ ಸಾಲಿನ ರಾಜ್ಯಾದ್ಯಂತ ನಗರ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಅವಾಸ್ (ನಗರ) 2.0 ಯೋಜನೆಯಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ನಿವಾಸಿಗಳಾದ ಒಂಟಿ ಮಹಿಳೆಯರು, ಅಂಗವಿಕಲರು, ಹಿರಿಯ ನಾಗರಿಕರು, ತೃತೀಯ ಲಿಂಗಿಗಳು, ಎಸ್ಸಿ, ಎಸ್ಟಿ ಹಾಗೂ ಹಿಂದುಳಿದವರು, ಅಲ್ಪಸಂಖ್ಯಾತ ವರ್ಗದವರು, ಸ್ವಚ್ಛತಾ ಕಾರ್ಮಿಕರು, ಪಿಎಂ ಸ್ವನಿಧಿ ಯೋಜನೆಯಡಿ ಗುರುತಿಸಲ್ಪಟ್ಟ ಬೀದಿ ಬದಿ ವ್ಯಾಪಾರಿಗಳು ಮತ್ತು ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯಡಿ ಗುರುತಿಸಿದ ಕುಶಲಕರ್ಮಿಗಳು, ಅಂಗನವಾಡಿ ಕಾರ್ಯ ಕರ್ತೆ ಯರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೈಗಾರಿಕರು,>>4

# ಬಯಲಾಟ ಹಳ್ಳಿಯ ನುಡಿಶಾಲೆ

## ಕರ್ನಾಟಕ ಬಯಲಾಟ ಅಕಾಡೆಮಿಯ ಅಧ್ಯಕ್ಷ ಡಾ. ಕೆ.ಆರ್. ದುರ್ಗಾದಾಸ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**
ಕಲೆಯೇ ಸಮಾಜದ ಕನ್ನಡಿ ಎಂಬುದಕ್ಕೆ ಬಯಲಾಟಕ್ಕಿಂತ ಉತ್ತಮ ಉದಾಹರಣೆ ಇನ್ನೊಂದಿಲ್ಲ. ಜಾತಿ, ಮತ, ಪಂಥ, ಬಡವ–ಶ್ರೀಮಂತ ಎಂಬ ಬೇಧವಿಲ್ಲದೆ ಎಲ್ಲರನ್ನೂ ಒಂದೆಡೆ ಸೇರಿಸುವ ಬಯಲಾಟದ ಸಾಮಾಜಿಕ ತತ್ವವೇ ಅದರ ಸೌಂದರ್ಯ ಎಂದು ಕರ್ನಾಟಕ ಬಯಲಾಟ ಅಕಾಡೆಮಿಯ ಅಧ್ಯಕ್ಷರಾದ ಡಾ. ಕೆ.ಆರ್. ದುರ್ಗಾದಾಸ ಅವರು ಪ್ರತಿಪಾದಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ 'ಕರ್ನಾಟಕ ಬಯಲಾಟಗಳ ಸಂಶೋಧನೆ: ಹೊಸ ಸಾಧ್ಯತೆಗಳು' ಎಂಬ ಎರಡು ದಿನಗಳ ವಿಚಾರ ಸಂಕಿರಣ ಮತ್ತು ಬಯಲಾಟ ಪ್ರದರ್ಶನ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಕರ್ನಾಟಕ ಬಯಲಾಟ ಅಕಾಡೆಮಿ (ಬಾಗಲಕೋಟೆ) ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಟಕ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವವಿದ್ಯಾಲಯದ ಭುವನ ವಿಜಯ ಕಟ್ಟಡದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಬಯಲಾಟದ ಆಳವಾದ ಬೇರುಗಳು ಮತ್ತು ಸಮಾಜದ ಮೇಲೆ ಅದರ ಪ್ರಭಾವದ ಕುರಿತು ಡಾ. ದುರ್ಗಾದಾಸ ಅವರು ಬೆಳಕು ಚೆಲ್ಲಿದರು.

### ರೈತಾಪಿ ಜನರ ಸೃಜನಶೀಲ ವೇದಿಕೆ

ಬಯಲಾಟ ಇಡೀ ಊರನ್ನೇ ಆವರಿಸಿಕೊಂಡು ಬಿಟ್ಟಿರುತ್ತದೆ. ಇಲ್ಲಿ ಮುಖ್ಯವಾಗಿ ರೈತಾಪಿ ಜನರು ಮತ್ತು ಬಡವರು ಹೆಚ್ಚು ಸಕ್ರಿಯವಾಗಿ ಭಾಗವಹಿಸುತ್ತಾರೆ." ಇದು ಕೇವಲ ಪ್ರದರ್ಶನವಲ್ಲ, ಜನರ ದೈನಂದಿನ ಬದುಕಿನಲ್ಲಿ ಹೊಸ ಸಂಚಲನ ಮೂಡಿಸುವ ಶಕ್ತಿಯನ್ನು ಇದು ಹೊಂದಿದೆ. "ಕಲಾವಿದನ ದೈನಂದಿನ ಮಾತುಗಳಿಗಿಂತ ಪ್ರದರ್ಶನದಲ್ಲಿ ಅವನ ಮಾತಿನ ಶಕ್ತಿ ಹೆಚ್ಚಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಬಡವರು, ಶ್ರಮಿಕರು ತಮ್ಮ ಜ್ಞಾನ ಮತ್ತು ಪ್ರತಿಭೆಯನ್ನು ಪ್ರದರ್ಶಿಸಲು ಇದೊಂದು ಉತ್ತಮ ವೇದಿಕೆ, ಬಯಲಾಟವು ಮೌಖಿಕ ಮತ್ತು ಲಿಖಿತ ಎರಡೂ ರೀತಿಯ ಅರ್ಥಗಳನ್ನು ಸಮರ್ಥವಾಗಿ ತಿಳಿಸುತ್ತದೆ. ಶಿಷ್ಟ ಮತ್ತು ದೇಶಿ ಸಾಹಿತ್ಯದ ಸಂವೇದನೆಯನ್ನು ಮೇಳೈಸುವ ಮೂಲಕ ಭಾಷಾ ಶೈಲಿಯನ್ನು ಶ್ರೀಮಂತಗೊಳಿಸುತ್ತದೆ. ಈ ಕಲೆಯು ಕಲಾವಿದರಿಗೆ ಆತ್ಮಸ್ಥೈರ್ಯ ತುಂಬುವ ಜೊತೆಗೆ, ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಜನರು ಪರಸ್ಪರ ಸಂಭಾಷಣೆ ನಡೆಸಲು ಪ್ರೇರೇಪಿಸುತ್ತದೆ.

"ಹಳ್ಳಿಯ ಕಡೆಗಳಲ್ಲಿ ಹಿಂದುಳಿದ ಜಾತಿಯ ಜನರೂ ಸಹ ಬಯಲಾಟದ ಮೇಷ್ಟುಗಳಾಗಿರುತ್ತಾರೆ. ಕಲಾವಿದರೇ ಆರ್ಥಿಕ ಸೌಲಭ್ಯಗಳನ್ನು ನೋಡಿಕೊಳ್ಳುತ್ತಾರೆ." ಬಯಲಾಟವನ್ನು ಅವರು "ಹಳ್ಳಿಯ ಶಾಲೆ" ಎಂದು ಬಣ್ಣಿಸಿದರು. ಸಾವಿರಾರು ಜನರನ್ನು ಒಂದೇ ಸ್ಥಳದಲ್ಲಿ ಕುಳಿತು ನೋಡುವಂತೆ ಮಾಡುವ ಈ ಕಲೆಯ ಮಹತ್ವವನ್ನು ಅವರು ಶ್ಲಾಘಿಸಿದರು. ವಿದ್ಯಾರ್ಥಿಗಳಿಗೆ ಬಯಲಾಟ ಸಂಶೋಧನೆಯ ಹೊಸ ಸಾಧ್ಯತೆಗಳನ್ನು ಈ ವಿಚಾರ ಸಂಕಿರಣದ ಮೂಲಕ ಅರಿಯಲು ನೆರವಾಯಿತು ಎಂದರು.

ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರು ಹಾಗೂ ಸಂಸ್ಕೃತಿಯ ಚಿಂತಕರಾದ ಡಾ. ರಹಮತ್ ತರೀಕೆರೆ ಅವರು ಮಾತನಾಡಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳು ಬಯಲಾಟಗಳ ತವರೂರು ಎಂದು ಬಣ್ಣಿಸಿದರು. "ಇಲ್ಲಿ ಹಲವಾರು ಮಹಾನ್ ಕಲಾವಿದರು, ಕವಿಗಳು ಇದ್ದರು. ಬಯಲಾಟದ ನಾಂದಿ ಪದಗಳನ್ನು ಮುಖ್ಯವಾಗಿ ಇಲ್ಲಿನ ಕವಿಗಳೇ ಬರೆಯುತ್ತಿದ್ದರು ಮತ್ತು ಹಾಡುತ್ತಿದ್ದರು," ಎಂದು ಸ್ಮರಿಸಿದರು. ಬಯಲಾಟವು ಹವ್ಯಾಸಿ ರಂಗಭೂಮಿ ಹಾಗೂ ಹಳ್ಳಿಯ ಸಾಂಸ್ಕೃತಿಕ ಕಲೆಯಾಗಿದ್ದು, ಸಮಾಜದ ಒಳಿತು ಮತ್ತು ಕೆಡುಕುಗಳನ್ನು ಜೊತೆಗೂಡಿ ಸಾಗುವ ಸಾಮರ್ಥ್ಯವನ್ನು ಹೊಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಬೋಧಕ, ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಗೂ ಬಯಲಾಟದ ಕಲಾವಿದರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಸುಮಾ ಕಮ್ಮಾರ ನಿರೂಪಿಸಿದರು. ಅರುಣ್ ಜೋಳದ ಕೂಡ್ಲಿಗಿ ಸ್ವಾಗತಿಸಿದರು. ಸತೀಶಗೌಡ ಬಿ. ವಂದಿಸಿದರು.

## ಎಸ್ಸೆಸ್ಸೆಲ್ಸಿ : ನಮ್ಮೂರ ವಿದ್ಯಾರ್ಥಿ, ನಮ್ಮ ಹೆಮ್ಮೆ
## ಸಾಮೂಹಿಕ ಪ್ರಯತ್ನದಿಂದ ಸಂಪೂರ್ಣ ಯಶಸ್ಸು!

ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನಿಷ್ಠ ಪ್ರತಿ ಶಾಲೆಗೂ 625ಕ್ಕೆ 625 ಅಂಕಗಳ ಗುರಿ ಸಾಧಿಸುವುದು ನಮ್ಮ ಸಂಕಲ್ಪ "ಈ ಬಾರಿ ಫಲಿತಾಂಶ ನಮ್ಮದೇ" ಎಂಬ ದೃಢ ವಿಶ್ವಾಸದೊಂದಿಗೆ, "ನಮ್ಮೂರ ವಿದ್ಯಾರ್ಥಿ, ನಮ್ಮ ಹೆಮ್ಮೆ" ಎಂಬ ಧ್ಯೇಯವಾಕ್ಯದಡಿ ಹಂಪಿಟೈಮ್ಸ್ ಬಳಗವು ಒಂದು ಮಹತ್ವದ ಅಭಿಯಾನಕ್ಕೆ ಕರೆ ನೀಡುತ್ತಿದೆ. ಈ ಬಾರಿಯೂ ಎಸ್ಸೆಸ್ಸೆಲ್ಸಿ ಫಲಿತಾಂಶವು ವಿಜಯನಗರ ಜಿಲ್ಲೆಗೆ ಅತ್ಯುನ್ನತ ಯಶಸ್ಸನ್ನು ತಂದುಕೊಡಬೇಕು ಎಂಬುದು ನಮ್ಮೆಲ್ಲರ ಆಶಯ. ವಿದ್ಯಾರ್ಥಿಗಳ ಫಲಿತಾಂಶ ಪ್ರಗತಿಗಾಗಿ ಹಂಪಿ ಟೈಮ್ಸ್ ಹಮ್ಮಿಕೊಂಡಿರುವ ಈ ಅಭಿಯಾನಕ್ಕೆ ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಶಾಲಾ ಶಿಕ್ಷಣ ಇಲಾಖೆಯು ಈ ನಿಟ್ಟಿನಲ್ಲಿ ಧನಾತ್ಮಕವಾಗಿ ಕೈಜೋಡಿಸಬೇಕು.

ಈ ಮಹತ್ವಾಕಾಂಕ್ಷೆಯ ಗುರಿ ಸಾಧನೆಗೆ ಗ್ರಾಮ ಮಟ್ಟದಲ್ಲಿ ಸಾಮೂಹಿಕ ಓದು ಅಭಿಯಾನವನ್ನು ಆರಂಭಿಸಬೇಕೆಂದು ನಾವು ಮನವಿ ಮಾಡುತ್ತೇವೆ. ಈ ಅಭಿಯಾನಕ್ಕೆ ಗ್ರಾಮದ ಸಮಸ್ತ ಶಿಕ್ಷಣ ಪ್ರೇಮಿಗಳು, ಆಯಾ ಶಾಲೆಯ ಹಳೆ ವಿದ್ಯಾರ್ಥಿಗಳು, ಗ್ರಾಮದ ಮುಖಂಡರು ಹಾಗೂ ಜನಪ್ರತಿನಿಧಿಗಳು ಕೈಜೋಡಿಸಿ ಸಹಕರಿಸಬೇಕೆಂದು ಹಂಪಿಟೈಮ್ಸ್ ಬಳಗವು ಹೃತ್ಪೂರ್ವಕವಾಗಿ ಕೋರುತ್ತದೆ.

ವಿದ್ಯಾರ್ಥಿಗಳ ಕಲಿಕೆಯನ್ನು ಸರಳ ಮತ್ತು ಪರಿಣಾಮಕಾರಿಯಾಗಿಸಲು, ಹಂಪಿ ಟೈಮ್ಸ್ ಪತ್ರಿಕೆಯು ಒಂದು ವಿಶೇಷ ಪ್ರಯತ್ನಕ್ಕೆ ಮುಂದಾಗಿದೆ. ಇಂದಿನಿಂದ, ಪ್ರತಿದಿನ ಒಂದು ವಿಷಯದಂತೆ ವಾರದುದ್ದಕ್ಕೂ ಕನ್ನಡ, ಗಣಿತ, ಇಂಗ್ಲೀಷ್, ವಿಜ್ಞಾನ, ಹಿಂದಿ ಹಾಗೂ ಸಮಾಜ ವಿಜ್ಞಾನ ಈ ಆರು ವಿಷಯಗಳ ಪ್ರಶ್ನೋತ್ತರಗಳನ್ನು ಪ್ರಕಟಿಸಲಾಗುವುದು. ಈ ಪ್ರಶ್ನೋತ್ತರಗಳು ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅತ್ಯಂತ ಸಹಕಾರಿಯಾಗಲಿವೆ. ಸಂಜೆ ನಿಮ್ಮೂರಲ್ಲೇ ನಡೆಯುವ ಸಾಮೂಹಿಕ ಓದಿನ ಅವಧಿಯಲ್ಲಿ, ವಿದ್ಯಾರ್ಥಿಗಳು ಈ ಪ್ರಶ್ನೋತ್ತರಗಳನ್ನು ಪ್ರತ್ಯೇಕವಾಗಿ ಬರೆದು, ಓದಿ, ಮನನ ಮಾಡುವುದರಿಂದ ಶಾಲಾ ಹಂತದಲ್ಲಿ ನಡೆಯುವ ಮತ್ತು ವಾರ್ಷಿಕ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಗಳಿಸಲು ಸಾಧ್ಯವಾಗಲಿದೆ. ಈ ಪ್ರಕ್ರಿಯೆಗೆ ವಿದ್ಯಾರ್ಥಿಗಳ ಪಾಲಕರು ಹಾಗೂ ಸಮುದಾಯದವರು ಸಹ ಸಹಕರಿಸುವುದು ಅನಿವಾರ್ಯ. ನಿರಂತರ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನಾಂದಿ ಆಗಲಿದೆ.

ನೆನಪಿಡಿ, ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಇಂದಿನಿಂದಲೇ ನಾವು ಪ್ರಯತ್ನಿಸಬೇಕು. ಅವರನ್ನು ಮೊಬೈಲ್ ಹಾಗೂ ಟಿ.ವಿ. ವೀಕ್ಷಣೆಯಿಂದ ದೂರವಿಟ್ಟು, ಶಿಕ್ಷಣದತ್ತ ಹೆಚ್ಚು ಗಮನ ಹರಿಸುವಂತೆ ಪ್ರೇರೇಪಿಸಲು ಇದೊಂದು ಉತ್ತಮ ಅವಕಾಶ. ಸಮುದಾಯದ ಪ್ರತಿಯೊಬ್ಬರೂ ಕೈಜೋಡಿಸಿದರೆ, ಶಾಲೆಗೊಂದು 625 ಸಾಧನೆಯಾಗುತ್ತದೆ. ಮಕ್ಕಳ ಭವಿಷ್ಯವನ್ನು ರೂಪಿಸುವ ಈ ಮಹತ್ಕಾರ್ಯದಲ್ಲಿ ಎಲ್ಲರೂ ಒಂದಾಗಿ ಹೆಜ್ಜೆ ಹಾಕೋಣ. ಈ ಬಾರಿ ವಿಜಯನಗರ ಜಿಲ್ಲೆ ಶೈಕ್ಷಣಿಕವಾಗಿ ರಾಜ್ಯಕ್ಕೆ ಮಾದರಿಯಾಗಲಿ!

– **ಬಸಾಪುರ ಬಸವರಾಜ, ಸಂಪಾದಕ, ಹಂಪಿ ಟೈಮ್ಸ್**


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES VIJAYANAGARA

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಫಲಿತಾಂಶ ಪ್ರಗತಿಗಾಗಿ
ಈ ಬಾರಿ ಫಲಿತಾಂಶ ನಮ್ಮದೆ
ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ
ನಿಮ್ಮೂರಲ್ಲೇ... ಸಂಜೆ ಸಾಮೂಹಿಕ ಓದು
ಶಾಲೆಗೊಂದು 625 ಅಭಿಯಾನಕ್ಕೆ ಕೈಜೋಡಿಸಿ
ವಾರ್ಡ್, ಗ್ರಾಮ ವ್ಯಾಪ್ತಿಯ
ಸಮಾಜ ಸೇವಕರು, ಶಿಕ್ಷಣ ಪ್ರೇಮಿಗಳು,
ಜನಪ್ರತಿನಿಧಿಗಳು, ಮಕ್ಕಳ ಶೈಕ್ಷಣಿಕ ಪ್ರಗತಿಗೆ
ಸಹಕಾರ ನೀಡಿ, ಮಕ್ಕಳ ಭವಿಷ್ಯಕ್ಕೆ ಬೆಳಕಾಗಿ
ನಿಮ್ಮ ಸಹಕಾರದ ನಿರೀಕ್ಷೆಯಲ್ಲಿ...
SCAN to READ HAMPI TIMES E-PAPER
ಹಂಪಿ ಟೈಮ್ಸ್ ಬಳಗ, ವಿಜಯನಗರ
94486 33038


SSLC ಹಂಪಿ ಟೈಮ್ಸ್ ಮಾರ್ಗದರ್ಶಿ
ಟಾಪರ್ ಆಗಲು ಇಂದಿನಿಂದಲೇ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಿ

# ಈ ಬಾರಿ ಫಲಿತಾಂಶ ನಮ್ಮದೆ
## ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ

www.hampitimes.com / https://epaper.hampitimes.com

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

HAMPI TIMES VIJAYANAGARA

## ಎಸ್ಸೆಸ್ಸೆಲ್ಸಿ ಪ್ರಥಮ ಭಾಷೆ ಕನ್ನಡ : ನಮ್ಮ ಭಾಷೆ (ಗದ್ಯ-1)

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

Hampi Times Margadarshi 2025-26

**ಲೇಖಕರ ಪರಿಚಯ:** ಎಂ. ಮರಿಯಪ್ಪ ಭಟ್ಟರು ಕ್ರಿಸ್ತಶಕ 1906 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕಬಕ ಗ್ರಾಮದಲ್ಲಿ ಜನಿಸಿದರು. ಅವರ ಕೃತಿಗಳು ಯಾವುವೆಂದರೆ ತುಳು– ಇಂಗ್ಲಿಷ್ ನಿಘಂಟು, ಅಭಿನವ ಮಂಗರಾಜ ನಿಘಂಟು, ಜಾತಕ ತಿಲಕಂ, ಛಂದಸ್ಸಾರ, ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ವರ್ಧಮಾನ ಪುರಾಣ, ಕಿಟೆಲ್ಲರ ಕನ್ನಡ –ಇಂಗ್ಲೀಷ್ ನಿಘಂಟು ಇನ್ನು ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು ಸಮಿತಿಯ' ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸರ್ಕಾರದ ಪುರಸ್ಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಭಾಷೆ ಯಾವುದಕ್ಕೆ ಸಾಧನವಾಗಿದೆ ?**
**ಉತ್ತರ–** ನಮ್ಮ ಸುತ್ತಮುತ್ತಲಿನರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಸಾಧನವಾಗಿದೆ.

**2. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಪೇತು ಕೊಡುತ್ತವೆ ?**
**ಉತ್ತರ–** ಪ್ರಾಣಿಗಳು ತಮ್ಮ ಮಕ್ಕಳಿಗೆ ಚಲನವಲನಗಳ ವಿಷಯವಾಗಿ ಹಾಗೂ ಆಹಾರ ವಿಚಾರಗಳ ವಿಚಾರವಾಗಿ ತಮ್ಮ ಮಕ್ಕಳಿಗೆ ಸಹಜವಾಗಿ ತರಪೇತು ಕೊಡುತ್ತವೆ.

**3. ಮನುಷ್ಯನಿಗೆ ಲೆಕ್ಕವಿಡುವ ಅವಶ್ಯಕತೆ ಯಾವಾಗ ಉಂಟಾಯಿತು ?**
**ಉತ್ತರ–** ನವಶೀಲಾಯುಗದ ಮಾನವ , ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಎಂದು ಮೊದಲು ಮಾಡಿದನೋ ಅಂದು ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು.

**4.ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?**
**ಉತ್ತರ–** ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು 12ನೇ ಶತಮಾನದ ಕವಿ ನಯಸೇನ.

**5. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು ?**
**ಉತ್ತರ–** ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಮಹಮ್ಮದೀಯರ ಆಳ್ವಿಕೆಯಲ್ಲಿ ಬಂದವು.

**6. ಕನ್ನಡ ಭಾಷೆಯ ಬಗ್ಗೆ ಮಹಾಲಿಂಗರಂಗರು ಏನೆಂದು ಹೇಳಿದ್ದಾರೆ?**
**ಉತ್ತರ–** ಕನ್ನಡ ಭಾಷೆಯ ಬಗ್ಗೆ ಮಹಾಲಿಂಗ ರಂಗರು " ಸುಲಿದ ಬಾಳೆಯ ಹಣ್ಣಿನಂತೆ , ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ ಸುಲಭವೂ ರುಚಿಯುಳ್ಳದ್ದು ಆಗಿದೆ ಎಂದು ಹೇಳಿದ್ದಾರೆ.

**7. ಕನ್ನಡಕ್ಕೆ ಬಂದ ಪರ್ಷಿಯ ನ್ ಶಬ್ದಗಳು ಯಾವುವು ?**
**ಉತ್ತರ–** ಕನ್ನಡಕ್ಕೆ ಬಂದ ಪರ್ಷಿಯನ್ ಶಬ್ದಗಳು ಯಾವುವೆಂದರೆ ದಿವಾನ, ಸರಕಾರ, ಮುನಷಿ, ಸರದಾರ, ದವಲತ್ತು, ಮುಸಾಫರ್, ಕಚೇರಿ, ಅಮಲ್ದಾರ, ತಹಶಿಲ್ದಾರ ಇತ್ಯಾದಿ.

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು –ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ವ್ಯಾವಹಾರಿಕ ಹಾಗೂ ಗ್ರಾಂಥಿಕ ಭಾಷೆಯ ಲಕ್ಷಣಗಳೇನು ?**
**ಉತ್ತರ–** ವ್ಯಾವಹಾರಿಕವೆಂದರೆ ಜೀವದ್ಭಾಷೆ. ಜನರು ಮಾತನಾಡುತ್ತಾರೆ. ವ್ಯವಹರಿಸುತ್ತಾರೆ. ಉದಾಹರಣೆಗೆ ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲೀಷ್. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ ಇತ್ಯಾದಿ ಈ ವರ್ಗಕ್ಕೆ ಉದಾಹರಣೆ. ಎಲ್ಲಾ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಆದರೆ ಅದು ಗ್ರಾಂಥಿಕ ಭಾಷೆಯಲ್ಲ, ಹಾಗೆಯೇ ಎಲ್ಲಾ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿ ಇರುವುದಿಲ್ಲ. ದೇವ ಭಾಷೆಯೆನಿಸಿಕೊಂಡ ಸಂಸ್ಕೃತ ಸರ್ವ ಸಂಪನ್ನತೆಯಿಂದ ಕೂಡಿದ ಗ್ರಾಂಥಿಕ ಭಾಷೆಯಾಗಿದೆ. ಆದರೆ ಇಂದು ಯಾವ ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿರುವುದಿಲ್ಲ.

**2. ಕನ್ನಡ ಭಾಷೆ ಹದಗೊಂಡದ್ದು ಹೇಗೆ ?**
**ಉತ್ತರ–** ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರರು ಅಲ್ಲಮಪ್ರಭು ಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿ ವ್ಯಕ್ತಪಡಿಸಿದರು ಹೀಗೆ ಕನ್ನಡ ಭಾಷೆಯು ಹದಗೊಂಡಿತು.

**3. ಆಂಗ್ಲ ಭಾಷೆ ವಿಶ್ವ ವ್ಯಾಪಿಯಾಗಲು ಕಾರಣವೇನು ?**
**ಉತ್ತರ–** ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ ಆಕಾಂಕ್ಷೆ ವಿಚಾರ ಮುಂತಾದವನ್ನು ಆ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಆಂಗ್ಲ ಜನರ ಸಂಕಲ್ಪ, ಕೃಷಿ ಕಾರಣವೆಂದು ಬೇರೆ ಹೇಳುವಂತಿಲ್ಲ.


SAIMANI ENTERPRISES
Sales & Distribution Genuine Toshiba Photocopiers and Galtech Smart Panels,
M: 9686663132

Scan For Digital Colourful
HAMPI TIMES E-paper


ಮಾರ್ಗದರ್ಶಿ ಶಿಕ್ಷಕರು:
ಶ್ರೀ ಮಧು.ಕೆ. ಸಹ ಶಿಕ್ಷಕರು,
ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ.
ಕೂಡ್ಲಿಗಿ(ತಾ) ವಿಜಯನಗರ(ಜಿ)



## ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಜುಲೈ 1 : ಪತ್ರಿಕಾ ದಿನ ಪ್ರಜಾಪ್ರಭುತ್ವದ ಧ್ವನಿ-ನಮ್ಮೆಲ್ಲರ ಹೊಣೆ

ಪ್ರತಿ ವರ್ಷ ಜುಲೈ 1 ರಂದು ನಾವು ಪತ್ರಿಕಾ ದಿನವನ್ನು ಆಚರಿಸುತ್ತೇವೆ. ಈ ದಿನವು ಕೇವಲ ಒಂದು ಕ್ಯಾಲೆಂಡರ್ ದಿನಾಂಕವಲ್ಲ, ಬದಲಿಗೆ ಪ್ರಜಾಪ್ರಭುತ್ವದ ನಾಲ್ಕನೇ ಆಧಾರಸ್ತಂಭವಾದ ಪತ್ರಿಕೋದ್ಯಮದ ಮಹತ್ವವನ್ನು ಸ್ಮರಿಸುವ ಒಂದು ಸಂದರ್ಭವಾಗಿದೆ. ಸಮಾಜದಲ್ಲಿ ಸತ್ಯವನ್ನು ಎತ್ತಿಹಿಡಿಯುವ, ಅನ್ಯಾಯವನ್ನು ಪ್ರಶ್ನಿಸುವ ಮತ್ತು ಜನಸಾಮಾನ್ಯರ ಧ್ವನಿಯನ್ನು ಸರ್ಕಾರಕ್ಕೆ ತಲುಪಿಸುವ ಗುರುತರ ಜವಾಬ್ದಾರಿ ಪತ್ರಿಕೋದ್ಯಮಕ್ಕಿದೆ.

ಇಂದಿನ ಡಿಜಿಟಲ್ ಯುಗದಲ್ಲಿ, ಸುದ್ದಿಗಳು ಅತಿ ವೇಗವಾಗಿ ಹರಡುತ್ತಿವೆ. ಆದರೆ, ಈ ವೇಗದ ಜೊತೆಗೆ ಸುಳ್ಳು ಸುದ್ದಿ (fake news) ಮತ್ತು ತಪ್ಪು ಮಾಹಿತಿ (misinformation) ಸಹ ಪ್ರವಾಹದಂತೆ ಹರಡುವ ಅಪಾಯವಿದೆ. ಇಂತಹ ಸಂದರ್ಭದಲ್ಲಿ, ಸತ್ಯವನ್ನು ಪರಿಶೀಲಿಸಿ, ವಿಶ್ವಾಸಾರ್ಹ ಮಾಹಿತಿಯನ್ನು ಜನರಿಗೆ ತಲುಪಿಸುವಲ್ಲಿ ಪತ್ರಕರ್ತರ ಪಾತ್ರ ಇನ್ನಷ್ಟು ಮಹತ್ವ ಪಡೆಯುತ್ತದೆ. ಸಮಾಜವನ್ನು ಸುಶಿಕ್ಷಿತಗೊಳಿಸುವ ಮತ್ತು ನಾಗರಿಕರಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಉತ್ತೇಜಿಸುವ ಗುರುತರ ಜವಾಬ್ದಾರಿ ಪತ್ರಕರ್ತರ ಮೇಲಿದೆ.

ಪತ್ರಿಕೋದ್ಯಮವು ಕೇವಲ ವರದಿ ಮಾಡುವ ಕೆಲಸವಲ್ಲ, ಅದು ಸಮಾಜದ ಕನ್ನಡಿಯಾಗಿ ಕಾರ್ಯನಿರ್ವಹಿಸುತ್ತದೆ. ಸರ್ಕಾರದ ನೀತಿಗಳನ್ನು ವಿಶ್ಲೇಷಿಸುವುದು, ಸಾರ್ವಜನಿಕರ ಸಮಸ್ಯೆಗಳನ್ನು ಬೆಳಕಿಗೆ ತರುವುದು, ಭ್ರಷ್ಟಾಚಾರವನ್ನು ಬಯಲು ಮಾಡುವುದು, ಇವೆಲ್ಲವೂ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಅತ್ಯಗತ್ಯ. ಕೆಲವೊಮ್ಮೆ, ಸತ್ಯವನ್ನು ಹೇಳುವ ಧೈರ್ಯದಿಂದ ಪತ್ರಕರ್ತರು ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ, ಆದರೆ ಅವರ ಅಚಲ ಬದ್ಧತೆ ಪ್ರಶಂಸನೀಯ.

**ಪತ್ರಿಕೋದ್ಯಮದ ಉಳಿವಿಗಾಗಿ ಸಮಾಜದ ಪಾತ್ರ**

ಪತ್ರಿಕಾ ಸ್ವಾತಂತ್ರ್ಯ ಮತ್ತು ಉತ್ತಮ ಪತ್ರಿಕೋದ್ಯಮ ಕೇವಲ ಪತ್ರಕರ್ತರ ಜವಾಬ್ದಾರಿಯಲ್ಲ, ಅದು ಓದುಗರ ಸಹಕಾರ ಮತ್ತು ಜವಾಬ್ದಾರಿಯನ್ನೂ ಒಳಗೊಂಡಿದೆ. ಪತ್ರಿಕೆಗಳು ಮತ್ತು ಸುದ್ದಿ ಮಾಧ್ಯಮಗಳು ಆರ್ಥಿಕವಾಗಿ ಸದೃಢವಾಗಿದ್ದರೆ ಮಾತ್ರ ಅವು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯ. ಜಾಹೀರಾತುಗಳ ಹೊರತಾಗಿಯೂ, ಗುಣಮಟ್ಟದ ಪತ್ರಿಕೋದ್ಯಮಕ್ಕೆ ಬೆಂಬಲ ನೀಡಲು ಓದುಗರು ಸಿದ್ಧರಿರಬೇಕು.

**ವಿಶ್ವಾಸಾರ್ಹ ಸುದ್ದಿ ಮಾಧ್ಯಮಗಳನ್ನು ಆಯ್ಕೆ ಮಾಡಿ:** ಸುಳ್ಳು ಸುದ್ದಿಗಳಿಂದ ತುಂಬಿರುವ ಸಾಗರದಲ್ಲಿ, ಸತ್ಯವನ್ನು ಮಾತ್ರ ವರದಿ ಮಾಡುವ, ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಮಾಧ್ಯಮಗಳನ್ನು ಗುರುತಿಸಿ, ಅವುಗಳಿಗೆ ಬೆಂಬಲ ನೀಡುವುದು ಓದುಗರ ಕರ್ತವ್ಯದಲ್ಲೊಂದು.

**ಚಂದಾದಾರರಾಗಿ (Subscribe):** ನೀವು ಇಷ್ಟಪಡುವ ಪತ್ರಿಕೆಗಳಿಗೆ, ಡಿಜಿಟಲ್ ಸುದ್ದಿಗಳ ವೆಬ್‌ಸೈಟ್‌ಗಳಿಗೆ ಚಂದಾದಾರರಾಗುವ ಮೂಲಕ ಪತ್ರಕರ್ತರ ಶ್ರಮಕ್ಕೆ ಬೆಲೆ ಕೊಡಿ. ಇದು ಅವರ ಕಾರ್ಯನಿರ್ವಹಣೆಗೆ ಆರ್ಥಿಕ ಬೆಂಬಲ ನೀಡಿದಂತಾಗುತ್ತದೆ.

**ಸುದ್ದಿಗಳನ್ನು ಪರಿಶೀಲಿಸಿ:** ಯಾವುದೇ ಸುದ್ದಿಯನ್ನು ನಂಬುವ ಮೊದಲು, ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಅಭ್ಯಾಸ ರೂಢಿಸಿಕೊಳ್ಳಿ. ತಮಗೆ ಸತ್ಯ ಎನ್ನಿಸಿದವನ್ನು ಮಾತ್ರ ಶೇರ್ ಮಾಡಬಹುದು. ಎಚ್ಚರವಹಿಸದಿದ್ದರೆ ಅಜ್ಞಾನದಿಂದ ಸುಳ್ಳು ಸುದ್ದಿ ಹರಡುವಿಕೆಗೂ ಕಾರಣರಾಗಬಹುದು.

**ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸಿ:** ಪತ್ರಕರ್ತರ ಮೇಲೆ ಆಗುವ ಯಾವುದೇ ರೀತಿಯ ದಾಳಿ, ಬೆದರಿಕೆ ಅಥವಾ ನಿರ್ಬಂಧಗಳನ್ನು ವಿರೋಧಿಸಿ. ಪತ್ರಿಕಾ ಸ್ವಾತಂತ್ರ್ಯ ಹಕ್ಕುಗಳನ್ನು ರಕ್ಷಿಸುವುದನ್ನು ಆದ್ಯ ಕರ್ತವ್ಯವೆಂದು ಭಾವಿಸಬೇಕು. ಪತ್ರಿಕಾ ದಿನದಂದು, ನಾವು ಸತ್ಯದ ಹುಡುಕಾಟದಲ್ಲಿ ನಿರತರಾಗಿರುವ ಎಲ್ಲ ಪತ್ರಕರ್ತರಿಗೆ ಕೃತಜ್ಞತೆ ಸಲ್ಲಿಸೋಣ. ಅವರ ಪ್ರಯತ್ನವಿಲ್ಲದೆ, ನಮ್ಮ ಸಮಾಜವು ಕತ್ತಲೆಯಲ್ಲಿ ಉಳಿಯಬಹುದು. ಪ್ರಜಾಪ್ರಭುತ್ವದ ಈ ಮಹತ್ವದ ಆಧಾರಸ್ತಂಭವನ್ನು ಬಲಪಡಿಸಲು ಎಲ್ಲರೂ ಒಟ್ಟಾಗಿ ನಿಲ್ಲಬೇಕು. ಪತ್ರಿಕೋದ್ಯಮ ಉಳಿದರೆ, ಪ್ರಜಾಪ್ರಭುತ್ವ ಉಳಿಯುತ್ತದೆ. ಅದಕ್ಕೆ ನಿಮ್ಮ ಬೆಂಬಲ ಅತ್ಯಗತ್ಯ. ಈ ಪತ್ರಿಕಾ ದಿನದಂದು, ಗುಣಮಟ್ಟದ ಪತ್ರಿಕೋದ್ಯಮವನ್ನು ಬೆಂಬಲಿಸುವ ಮತ್ತು ಸತ್ಯವನ್ನು ಎತ್ತಿಹಿಡಿಯುವ ಪ್ರತಿಜ್ಞೆ ಆಗಬೇಕು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038


## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**01 ಜುಲೈ 1925 ಹಿ. ಮ. ನಾಗಯ್ಯನವರ ಜನ್ಮ ದಿನ. ಈ ವರ್ಷ ಅವರ ಜನ್ಮ ಶತಮಾನೋತ್ಸವದ ವರ್ಷವೂ ಹೌದು. ಅವರ ನೆನಪಿಗಾಗಿ ಅವರ ಕವಿತೆಯೊಂದರ ವಿಮರ್ಶೆ.**

# ಜೀವ ಪ್ರೀತಿಯ ಕವಿ ಹಿ.ಮ.ನಾಗಯ್ಯ

ಬದುಕಿನ ಕುರಿತು ತುಂಬ ಪ್ರೀತಿಯನ್ನಿಟ್ಟುಕೊಂಡು, ಎಲ್ಲಕ್ಕಿಂತ ಬದುಕು ದೊಡ್ಡದು ಎಂದು ತಮ್ಮ ಕಾವ್ಯದಲ್ಲಿ ಸಾರುತ್ತಾ ಕಾವ್ಯಪ್ರೀತಿ, ಜೀವನ ಪ್ರೇಮ ಎರಡನ್ನೂ ಹದವಾಗಿ ಬೆರೆಸಿ ಅದರಂತೆ ಬಾಳಿ ಬದುಕಿದವರು ಶ್ರೀ ಹಿ. ಮ. ನಾಗಯ್ಯನವರು. ಬದುಕಿನೊಂದಿಗೆ ಸೆಣೆಸುತ್ತಾ ತಾವು ನೋವನುಂಡು ಜಗಕೆ, ಅಮೃತಧಾರೆಯನ್ನು, ಹರಿಸಿದರು. ಹಿಮಾಲಯದ ಔನ್ನತ್ಯದ ವ್ಯಕ್ತಿತ್ವದ ಹಿಮನಾ ಎಂದೇ ಪ್ರಸಿದ್ಧರಾದ ಇವರು ಪತ್ರಕರ್ತರಾಗಿ ವೃತ್ತಿಜೀವನ ಸಾಗಿಸಿದರು. ಕೆಲಕಾಲ ರಾಜಕಾರಣಿಯಾಗಿದ್ದರೂ ಅದಕ್ಕೆ ಅಂಟಿಕೊಳ್ಳಲಿಲ್ಲ. ಭಾವಜೀವಿಯಾಗಿದ್ದ ಇವರು ಕನ್ನಡ ನಾಡಿನಲ್ಲಿ ಕವಿ ಎಂದೇ ಪ್ರಸಿದ್ಧರಾದರು. ಕಾವ್ಯ ಇವರ ಜೀವದುಸಿರಾಗಿತ್ತು. ಸದಾ ಕವಿಗಳ ಒಡನಾಟದಲ್ಲಿದ್ದು, ಕಾವ್ಯವನ್ನೇ ಧ್ಯಾನಿಸುತ್ತಾ 'ಭವ್ಯಭಾರತ ಭಾಗ್ಯೋದಯ' ಎಂಬ ಮಹಾಕಾವ್ಯವನ್ನು ರಚಿಸಿ ತಮ್ಮ ಪ್ರತಿಭೆಯನ್ನು ಮೆರೆದು ನಾಡು ನುಡಿಯ ಸೇವೆಗೈದರು. ಹುಟ್ಟಿ ಬೆಳೆದ ಮಣ್ಣಿನ ಋಣ ತೀರಿಸಿ ಬದುಕನ್ನು ಸಾರ್ಥಕಗೊಳಿಸಿಕೊಂಡರು. (1925–1992)



ಹಿ. ಮ. ನಾಗಯ್ಯ ಅವರು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಹಿರೇಕುಬಳಗುಂಟೆ ಎಂಬ ಚಿಕ್ಕ ಹಳ್ಳಿಯಲ್ಲಿ ಹುಟ್ಟಿ ಬೆಳೆದರು. ತಮ್ಮ ಊರಿನ ಪಕ್ಕದ ಕಾನಾಮಡುವು ಎಂಬ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯವರೆಗೆ, ಕೊಟ್ಟೂರಿನಲ್ಲಿ ಪ್ರೌಢಶಾಲೆಯವರೆಗೆ ಹಾಗೂ ಬಳ್ಳಾರಿಯಲ್ಲಿ ಇಂಟರ್ ಮೀಡಿಯಟ್ ವರೆಗೂ ವಿದ್ಯಾಭ್ಯಾಸ ಮಾಡಿದರು. ಇಲ್ಲಿಗೆ ಅವರ ಔಪಚಾರಿಕ ಶಿಕ್ಷಣ ಮುಗಿಯಿತು.


ಹುಟ್ಟು ಕವಿಗಳಾಗಿದ್ದ ಇವರ ಲೋಕವೇ ಬೇರೆಯದಾಗಿತ್ತು. ಸುಸಂಸ್ಕೃತ ಮನೆಯ ವಾತಾವರಣ, ಸುಂದರ ಹಳ್ಳಿಯ ಪರಿಸರ, ವಿಸ್ತಾರವಾದ ಗ್ರಂಥಗಳ ಅಧ್ಯಯನ ಇವುಗಳು ಹಿಮನಾ ಅವರ ಭಾವಲೋಕ ಅರಳಲು ಕಾರಣವಾದವು. ಹಳಗನ್ನಡದ ಅಭ್ಯಾಸ, ನವೋದಯ ಕಾವ್ಯದ ಅಧ್ಯಯನ, ಒಂದಷ್ಟು ಇಂಗ್ಲೀಷ್ ಸಾಹಿತ್ಯದ ಓದುವಿಕೆ, ಸಹೃದಯೀ ಮಿತ್ರರ, ಪಂಡಿತರ ಒಡನಾಟ ಇವುಗಳು ಅವರ ಕಾವ್ಯ ಗಟ್ಟಿಗೊಳ್ಳಲು ಪ್ರೇರಣೆ ನೀಡಿದವು. ಹಾಗಾಗಿ ವಿದ್ಯಾರ್ಥಿಯಾಗಿದ್ದಾಗಲೇ ಅನೇಕ ಕವಿತೆಗಳನ್ನು ರಚಿಸಿ ಸಹೃದಯರಿಂದ 'ಕವಿ' ಎಂಬ ಪ್ರಶಂಸೆಗೆ ಒಳಗಾಗಿದ್ದರು.

ಹಿಮನಾ ಜೀವನಪೂರ್ತಿ ಪತ್ರಕರ್ತರಾಗಿ ಕನ್ನಡ ಪತ್ರಿಕೋದ್ಯಮದಲ್ಲಿ ದುಡಿದರು. ತಾಯಿನಾಡು, ಜಯಕರ್ನಾಟಕ, ಹಿಮಾಲಯ, ಲೋಕವಾಣಿ ಮುಂತಾದ ಪತ್ರಿಕೆಗಳಿಗೆ ಮುಖ್ಯ ವರದಿಗಾರರಾಗಿ, ಉಪಸಂಪಾದಕರಾಗಿ, ಸಂಪಾದಕರಾಗಿ ಕೆಲಸ ಮಾಡಿದರು. ಕರ್ನಾಟಕ ಪತ್ರಕರ್ತರ ಸಂಘಕ್ಕೆ ಅಧ್ಯಕ್ಷರಾಗಿದ್ದರು. ಇದರಿಂದಾಗಿ ರಾಜಕೀಯ ಲೋಕದ ಗಣ್ಯರು ಇವರ ಗೆಳೆಯರಾದರು. ಅಂತೆಯೇ ಹಿರಿಯ ಸಾಹಿತಿಗಳು, ಕವಿಗಳು ಇವರ ಚಿರಪರಿಚಿತರಾದರು. ರಾಮಕೃಷ್ಣ ಹೆಗಡೆ ಅವರ ಗೆಳೆತನದಿಂದಾಗಿ ರಾಜಕೀಯವನ್ನು ಪ್ರವೇಶಿಸಿ ಬೆಂಗಳೂರು ಮಹಾನಗರದ ಜನತಾದಳದ ಅಧ್ಯಕ್ಷರಾದರು. ಬೆಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಸದಸ್ಯರಾಗಿ ಕೆಲವು ಕಾಲ ಕರ್ತವ್ಯ ನಿರ್ವಹಿಸಿದರು. ರಾಜಕೀಯದಿಂದ ನಿವೃತ್ತರಾದ ಮೇಲೆ ತಾವು ಮಾಡಿದ್ದ ಸಾಲಗಳನ್ನು ತೀರಿಸಲು ತಮ್ಮ ಮನೆ ಹಾಗೂ ತೋಟಗಳನ್ನು ಮಾರಿದರು. ಸಾರ್ವಜನಿಕ ಜೀವನದಲ್ಲಿದ್ದೂ ಯಾವ ಕೊಳೆಯನ್ನೂ, ಅಂಟಿಸಿಕೊಳ್ಳದೆ ತಮ್ಮ ಬಿಳಿಯ ಉಡುಪಿನಂತೆ ಪರಿಶುಭ್ರರಾಗಿಯೇ ಉಳಿದರು. ಇವರ ನಾಡು ನುಡಿಯ ಸೇವೆಯನ್ನು ಪರಿಗಣಿಸಿ ಕನ್ನಡನಾಡು ಇವರಿಗೆ ಸಂಡೂರಿನಲ್ಲಿ ನಡೆದ ಐದನೆಯ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ನೀಡಿ ಗೌರವಿಸಿತು.

ಇವರ ಮೊದಲನೆಯ ಕವನ ಸಂಕಲನ 'ಬಳ್ಳಾರಿಯ ಬೆಳಗು' 1948ರಲ್ಲಿ ಪ್ರಕಟವಾಯಿತು. ಅವರ ಇಪ್ಪತ್ಮೂರನೆಯ ವಯಸ್ಸಿನಲ್ಲಿ ಪ್ರಕಟವಾದ ಈ ಸಂಕಲನ ಅವರಿಗೆ ಪ್ರಸಿದ್ಧಿಯನ್ನು ತಂದು ಕೊಟ್ಟಿತು. ಹೊಸಗನ್ನಡದ ನವೋದಯ ಶೈಲಿಯಲ್ಲಿ ಪ್ರಕಟವಾದ ಈ ಸಂಕಲನ ತನ್ನ ಹೊಸತನದಿಂದ ಎಲ್ಲರಲ್ಲಿ ಬೆರಗು ಮೂಡಿಸಿತ್ತು. ತಮ್ಮ ಜೊತೆಯ ಹಳ್ಳಿಯ ಹುಡುಗನೊಬ್ಬ ಹೊಸ ರೀತಿಯಲ್ಲಿ ಕಾವ್ಯವನ್ನು ಬರೆದು ಕವಿಗಳ ಸಾಲಿನಲ್ಲಿ ಸೇರಿದ್ದು ಈ ಭಾಗದ ವಿದ್ಯಾವಂತರಿಗೆಲ್ಲ ಸಂತಸವನ್ನೂ ಸೋಜಿಗವನ್ನೂ ತಂದಿತ್ತು.

ತಮ್ಮ ಜೀವಿತಾವಧಿಯಲ್ಲಿ ಹಿಮನಾ ಅವರು ಪ್ರಮುಖವಾಗಿ ಆರು ಕವನ ಸಂಕಲನಗಳನ್ನೂ, ಒಂದು ಮಹಾ ಕಾವ್ಯವನ್ನೂ, ಒಂದು ಕಥಾ ಸಂಕಲನವನ್ನೂ, ನಾಲ್ಕು ವ್ಯಕ್ತಿಚಿತ್ರಗಳನ್ನೂ ರಚಿಸಿದ್ದಾರೆ. ತಮ್ಮ 'ತುಂಬು ಅರಳಿದ ಬೇವು' ಕವನ ಸಂಕಲನದ ಇಂಗ್ಲೀಷ್ ಅನುವಾದ 'Nectar of Neem' ಎಂಬ ಸಂಕಲನವನ್ನೂ ರಚಿಸಿದ್ದಾರೆ.

ನಾಗಯ್ಯನವರ ಕಾವ್ಯಭಾಷೆ ತುಂಬ ಸರಳವಾದುದು. ಸರಳವಾದ ಪದಗಳಲ್ಲಿಯೇ ತಮ್ಮ ಅನುಭವಗಳನ್ನು ಕಾವ್ಯವನ್ನಾಗಿಸಿದ್ದಾರೆ. ತಮ್ಮ 'ಭವ್ಯ ಭಾರತ ಭಾಗ್ಯೋದಯ' ಮಹಾಕಾವ್ಯದಲ್ಲಿ ತಮ್ಮ ಕಾವ್ಯದ ಭಾಷೆಗೆ ಸಂಬಂಧಿಸಿದಂತೆ ಅವರು ಒಂದು ಮಾತು ಹೇಳಿದ್ದಾರೆ. ಅದು ಅವರ ಇತರೆಲ್ಲ ಕವನಗಳಿಗೂ ಹೊಂದುತ್ತದೆ. "ಇಲ್ಲಿನ ಭಾಷೆ ಸರಳವಾದದ್ದು. ಏಕೆಂದರೆ ಗಂಡು ಭಾಷೆ ನನಗೆ ಒದಗಿ ಬಂದಿಲ್ಲ, ಅಭ್ಯಾಸವಿಲ್ಲ. ಬೆಟ್ಟ ಹತ್ತುವ ಸಾಹಸದಂತೆ ಗಂಡುಭಾಷೆಯನ್ನು ನಾವು ಬಳಸಿದರೆ ಅದು ಸಾಮಾನ್ಯ ಪ್ರಜೆಯನ್ನು ನಿಲುಕಲಾರದು. ಆದ್ದರಿಂದ ನಾನು ಸರಳ ಭಾಷೆಯನ್ನು ಬಳಸಿಕೊಂಡಿ ದ್ದೇನೆ" ಇದು ಅವರ ಕಾವ್ಯಕ್ಕಷ್ಟೇ ಅಲ್ಲ, ಅವರ ಬದುಕಿಗೂ ಅನ್ವಯವಾಗುತ್ತದೆ.



ಬಿ.ಎಂ.ರಾಜಶೇಖರ
ಮೊ: 9900705323

Scan For Digital Colourful
HAMPI TIMES E-paper

ಪ್ರಮುಖವಾಗಿ ನಾಗಯ್ಯನವರು ಬದುಕಿಗೆ ಭರವಸೆಯನ್ನು ನೀಡುವ ಕವಿ, ಕಾವ್ಯಪ್ರೇಮ, ಜೀವ ಪ್ರೇಮ ಎರಡನ್ನೂ ಹದವಾಗಿ ಬೆರೆಸಿ ಬದುಕಿನ ಸಂಕಷ್ಟಗಳನ್ನು ಎದುರಿಸಿ ಮುನ್ನುಗ್ಗಲು ಹುರಿದುಂಬಿಸುತ್ತಾರೆ. ಎಲ್ಲಕ್ಕಿಂತ ಬದುಕು ದೊಡ್ಡದು ಎಂಬುದನ್ನು ಪ್ರತಿಪಾದಿಸುತ್ತಾ, ಜೀವನ ಪ್ರೀತಿಯನ್ನು ಮತ್ತೆ ಮತ್ತೆ ಹೆಚ್ಚಿಸಿಕೊಳ್ಳುತ್ತಾ ಮುನ್ನಡೆಯಲು ತಮ್ಮ ಕಾವ್ಯದ ಮೂಲಕ ಪ್ರೇರಣೆಯನ್ನು ನೀಡುತ್ತಾರೆ. ಬದುಕಿನಲ್ಲಿ ಎಂತಹ ಸಂಕಷ್ಟಗಳು ಎದುರಾದರೂ ಹಿಂಜರಿಯದೇ ಮುನ್ನುಗ್ಗಲು ಧೈರ್ಯ ತುಂಬುತ್ತಾರೆ.

ಸರಳವಾದ ಕಾವ್ಯ ಶೈಲಿಯನ್ನು ಅಭಿವ್ಯಕ್ತಿ ಮಾರ್ಗವನ್ನಾಗಿಸಿಕೊಂಡ ಇವರು ಪ್ರೀತಿ, ಪ್ರೇಮ, ದೇಶಭಕ್ತಿ, ನಾಡ ಅಭ್ಯುದಯ, ನಾಡು ನುಡಿಯ ಪ್ರೇಮ, ಪ್ರಕೃತಿಯ ವರ್ಣನೆ ಹೀಗೆ ನಾನಾ ಬಗೆಯ ಕವನಗಳನ್ನು ರಚಿಸಿ ನವೋದಯ ಮಾರ್ಗದ ಕವಿಯೆನಿಸಿದ್ದಾರೆ.

ಇವರ 'ನೀವೆಲ್ಲ ನಮ್ಮವರೆ' ಎಂಬ ಸಂಕಲನದ (1974) 'ಆಶಾಕಿರಣ' ಎಂಬ ಕವಿತೆ ಅವರ ಕಾವ್ಯಪ್ರೇಮಕ್ಕೂ, ಜೀವಪರ ಪ್ರೀತಿಗೂ ಧ್ವನಿಯಾಗಿದೆ. ಇದು ಅವರ ಕಾವ್ಯದ ಹಾಗೂ ಬದುಕಿನ ಸಾರವೇ ಹರಳುಗಟ್ಟಿದ ಅಭಿವ್ಯಕ್ತಿಯಾಗಿದೆ. ಆಶಾಕಿರಣ ಎನ್ನುವ ಈ ಕವನ ಅವರ ಪ್ರಾತಿನಿಧಿಕ ಕವಿತೆಯೂ ಆಗಿದೆ. ಇಲ್ಲಿ ಅದರ ಪೂರ್ಣಪಾಠವಿದೆ.

### ಆಶಾಕಿರಣ

**ಕಪ್ಪು ಮೋಡದ ಹಿಂದೆ ಕಿರಣ ಕಣ್ ತೆರೆದಿತ್ತು**
**ಕಾವ ಕರುಣೆಯ ಕಣ್ಣ ಸನ್ನೆಯಂತೆ**
**ಹೆಪ್ಪುಗಟ್ಟಿದ ಬುದ್ದಿ ಹನಿಯೊಡೆದು ಮಿನುಗಿತ್ತು**
**ಭಾವಸಂಕುಲಕಿನಿತು ಹಣಿಸುವಂತೆ**
**ಮಬ್ಬು ಹರಡಿದ ಮನದಿ ಹಣತೆ ಮಿಣುಕುತಲಿತ್ತು**
**ದಾರಿ ತೋರುವ ದಿವ್ಯ ಜ್ಯೋತಿಯಂತೆ**
**ದಿಬ್ಬದಾಚೆಯ ಹಳ್ಳ ಪಿಳಿಯಾಗಿ ಹರಿದಿತ್ತು**
**ದೂರ ದಾರಿಯ ದಣಿವ ತಣಿಸುವಂತೆ**
**ಕಡಿದ ಮರದಲಿ ಮತ್ತೆ ಕೊನರು ಕಾಣುತಲಿತ್ತು**
**ಬರಡು ಭೂಮಿಗೆ ಹಸಿರು ತೊಡಿಸುವಂತೆ**
**ಜಡದಿ ಜೀವದ ಸುಳಿವು ಒಳಗೊಳಗೆ ಇಣುಕಿತ್ತು**
**ಬರುವ ಬದುಕಿಗೆ ಬಗೆಯ ತೋರುವಂತೆ.**




ನಾಗಯ್ಯನವರು ನವೋದಯ ಮಾರ್ಗದ ಎಲ್ಲ ಕವಿಗಳಂತೆ ಉನ್ನತ ಆದರ್ಶದ ಕನಸಿನೊಂದಿಗೆ, ಸೌಂದರ್ಯಾನುಭೂತಿ ಸಾಕ್ಷಾತ್ಕಾರದ ಬಯಕೆ, ಹಿರಿದಾದ ಗುಣಾತ್ಮಕ ಬದುಕಿನ ಹಂಬಲ, ಎಲ್ಲಕ್ಕೂ ಬೇಕಿರುವ ದೈವದೊಲುಮೆ ಇತ್ಯಾದಿ ಅಂಶಗಳನ್ನು ಗರ್ಭೀಕರಿಸಿಕೊಂಡು ಕಾವ್ಯ ಸೃಷ್ಟಿಯ ಮಣಿಹವನ್ನು ತುಂಬ ಗಂಭೀರವಾಗಿ ತೆಗೆದುಕೊಂಡು, ಕಾವ್ಯದ ಮೂಲಕ ಎಲ್ಲರ ಬದುಕನ್ನು ಸುಂದರಗೊಳಿಸಲು ಯತ್ನಿಸುತ್ತಾರೆ. ಕವಿತೆಯೆನ್ನುವುದು ಅಂತರಂಗದ ಅಭಿವ್ಯಕ್ತಿಯೇ ಆದರೂ ಅದು ಸಮಷ್ಟಿ ಪ್ರಜ್ಞೆಯನ್ನು ಒಳಗೊಂಡಿರಬೇಕು ಎನ್ನುವುದನ್ನು ತಮ್ಮ ಕಾವ್ಯದಲ್ಲಿ ಸಮರ್ಥವಾಗಿ ತೋರಿಸುತ್ತಾರೆ.

ಒಳ್ಳೆಯ ಬದುಕು, ಸಂತೃಪ್ತಿಯ, ಸಂತೋಷದ ಬದುಕು ಎಲ್ಲರಿಗೂ ದೊರೆಯಲಾರದು. ಬದುಕಿನಲ್ಲಿ ತುಂಬ ನೋವು ಕಷ್ಟಗಳನ್ನು ಎದುರಿಸಿದವರಿಗೆ, ಸಮಸ್ಯೆಗಳಲ್ಲಿ ಸಿಲುಕಿದವರಿಗೆ ಒಂದು ಚಿಕ್ಕ ನೆರವು ಕೂಡಾ ಬದುಕನ್ನೆದುರಿಸಲು ಶಕ್ತಿಯನ್ನು ತುಂಬುತ್ತದೆ. ಲೌಕಿಕವೋ, ಅಲೌಕಿಕವೋ ಆದ ನೆರವಿನ ಹಸ್ತ ಮನುಷ್ಯನ ಬಾಳಿಗೆ ಭರವಸೆಯನ್ನು ತರುತ್ತದೆ. ಧೈರ್ಯ, ಛಲ, ಮುನ್ನುಗ್ಗುವ ಶಕ್ತಿಯನ್ನು ನೀಡುತ್ತದೆ. ಮಾನವನ ಬಾಳಿಗೆ ಶಕ್ತಿಯನ್ನು ನೀಡುವ, ಗುಣಾತ್ಮಕ ಬದುಕಿನೆಡೆ ನಡೆಯುವ ಧೀಮಂತಿಕೆಯನ್ನು ಕಾವ್ಯವು ನೀಡುತ್ತದೆ. ಸಾಹಿತ್ಯದ ಶಕ್ತಿ ಅಗಾಧವಾದದ್ದು, ಸಾವಿರಾರು ವರ್ಷಗಳ ಹಿಂದೆ ಯಾವುದೋ ಭಾಷೆಯ ಯಾವುದೋ ಕವಿ ಬರೆದ ಕಾವ್ಯ ಇಂದಿಗೂ ಜೀವಂತವಾಗಿರುವುದು ಇಂತಹ ಗುಣಗಳಿಂದಲೇ. ಕಾವ್ಯದ ಇಂತಹ ಅಮೃತಧಾರೆ ನಿರಂತರವಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದು ಎಲ್ಲರ ಬದುಕನ್ನು ತಂಪಾಗಿರಿಸಿದೆ. ಮಾನವ ಕುಲವನ್ನು ಪೊರೆಯುತ್ತಿದೆ.

ಒಂದು ಅದ್ಭುತ ಸಾಲಿನೊಂದಿಗೆ ಈ ಪದ್ಯವನ್ನು ಕವಿ ಆರಂಭಿಸಿದ್ದಾರೆ. ಬದುಕಿಗೆ ಆವರಿಸಿಕೊಂಡಿರುವ ಸಂಕಷ್ಟಗಳನ್ನು ಈ ಕಪ್ಪು ಮೋಡದ ಪ್ರತಿಮೆ ಸೂಚಿಸಿದರೆ ಹಿಂದೆಯೇ ರವಿ ಕಿರಣ ಮೂಡಿ ಬೆಳಕು ಬರುವುದರ ಸೂಚನೆಯನ್ನು ನೀಡುತ್ತದೆ. ಈ ಕಣ್ಣು ತೆರೆಯುವುದು ನಮ್ಮೊಳಗಿನ ಅಂಧಕಾರವನ್ನು ದೂರ ಮಾಡುವುದೂ ಆಗಿದೆ. ಈ ಜಗತ್ತನ್ನು ತೋರಿಸುವುದೂ ಆಗಿದೆ. ಆಧ್ಯಾತ್ಮದ ಪರಿಭಾಷೆಯಲ್ಲಿ ದೈವದೊಲುಮೆಯ ಸೂಚನೆಯೂ ಆಗಿದೆ. ನಮ್ಮ ಬಹುತೇಕ ಆರಂಭಿಕ ನವೋದಯ ಕವಿತೆಗಳಲ್ಲಿ ಈ ಭಾವ ಹಂತ ಹಂತವಾಗಿ ಬೆಳೆದು ಕೊನೆಯ ಪಂಕ್ತಿಗಳಲ್ಲಿ ದೈವದೆಡೆಗೆ ಜಿಗಿಯುವುದನ್ನು ನಾವು ನೋಡುತ್ತೇವೆ. ಆ ಕವಿತೆಗಳು ಓದುಗರನ್ನು ಅಂತಹ ಸ್ಥಿತಿಗೆ ಸಿದ್ದಗೊಳಿಸಿ ಕೊನೆಯಲ್ಲಿ ಧ್ಯಾನಸ್ಥ ಮನೋಸ್ಥಿತಿಗೆ, ತನ್ಮಯತೆಗೆ ಕೊಂಡೊಯ್ಯುತ್ತವೆ. ಆದರೆ ಇಲ್ಲಿ ಕವಿ ಮೊದಲಿನ ಸಾಲುಗಳಲ್ಲೇ ನಮ್ಮನ್ನು ಧುತ್ತನೇ ರೋಮಾಂಚನಗೊಳಿಸುವ ದರ್ಶನಕ್ಕೆ ತಂದು ನಿಲ್ಲಿಸುತ್ತಾರೆ. 'ಕಾವ ಕರುಣೆಯ ಕಣ್ಣು ಸನ್ನೆ' ಇದನ್ನು ಪೂರ್ಣಗೊಳಿಸುತ್ತದೆ. ಎಲ್ಲರನ್ನೂ ಕಾಯುವ ಕರುಣೆಯ ಕಣ್ಣು ನಮ್ಮನ್ನು ಗಮನಿಸುತ್ತಲೇ ಇರುತ್ತದೆ ಎಂಬ ಸಾಂತ್ವನವನ್ನು ಕವಿತೆ ನೀಡುತ್ತದೆ. ಹೆಪ್ಪುಗಟ್ಟಿದ ಕಪ್ಪು ಮೋಡಗಳು ಹಾಗೆಯೇ ಇರಲು ಸಾಧ್ಯವಿಲ್ಲ. ಅವು ನೆಲದ ಬಯಕೆಗೆ ಮಣಿದು ಹನಿಯಾಗಿ ಇಳಿದು ಇಳೆ ತಣಿಸಲೇಬೇಕು. ಹನಿಗಳು ಮಿಂಚಿನ ಬೆಳಕಲ್ಲಿ ಹೊಳೆಯುತ್ತಾ ಕಣ್ಮನ ತಣಿಸುತ್ತವೆ. ಈ ಚರಣದ ಕೊನೆಯ ಸಾಲು ಕವಿಯ ಎದೆಯಿಂದ ಕಾವ್ಯ ಹೊರ ಬರುವ ಅದ್ಭುತ ಸೃಷ್ಟಿಕ್ರಿಯೆಯನ್ನು ತೋರಿಸುತ್ತಾ ಇಡೀ ಪದ್ಯಕ್ಕೊಂದು ಹೊಳಪನ್ನು ನೀಡುತ್ತದೆ. ಭೌತಿಕ ಜಗತ್ತಿಗೆ, ಆದಿ ಭೌತಿಕ ಲೋಕಕ್ಕೆ ಕರೆದೊಯ್ಯುತ್ತಾರೆ. ಆ ಕರುಣೆಯ ಕಣ್ಣು ನಮ್ಮ ಭಾವ ಜಗತ್ತನ್ನು ಉಳಿಸುತ್ತದೆ, ಬೆಳೆಸುತ್ತದೆ, ಬಲಗೊಳಿಸುತ್ತದೆ. ಕಾವ್ಯ ಜನರನ್ನು, ಜಗವನ್ನು ಕಾಪಾಡುತ್ತದೆ. ಕವಿ ಈ ಜಗದ ಕಣ್ಣು ಎಂಬುದು ಮತ್ತೆ ಮತ್ತೆ ದೃಢವಾಗುತ್ತದೆ.

ಎರಡನೆಯ ಚರಣದಲ್ಲೂ ಬೆಳಕಿನ ಪ್ರಸ್ತಾಪವಿದೆ. ಇದು 'ಮಬ್ಬು ಹರಡಿದ ಮನದಿ ಹಣತೆ ಮಿಣುಕುತಲಿತ್ತು' ಎಂದು ಆರಂಭವಾಗುತ್ತದೆ. ಮೊದಲ ಚರಣದಲ್ಲಿ ಹೊರಜಗತ್ತಿನ ಸಂಗತಿಗಳೊಂದಿಗೆ ಆರಂಭವಾದರೆ ಇಲ್ಲಿ ನೇರವಾಗಿ ಒಳ ಜಗತ್ತಿನ ವಿಚಾರಗಳು ತೆರೆಯುತ್ತವೆ. ಹೊರಜಗತ್ತಿನ ಕತ್ತಲು ಬದಲಾಗಿ ಬೆಳಕು ಮಾಡುವುದು ಸುಲಭ. ಆದರೆ ಒಳಜಗದ ಕತ್ತಲು ಬೇಗನೆ ಹೋಗುವುದಿಲ್ಲ. ಈ ಮಬ್ಬು ಹರಿಯಲು ಒಳಬೆಳಕಿನ ಅಗತ್ಯ ಇರುತ್ತದೆ. ಹಣತೆಯ ಬೆಳಕು ಚಿಕ್ಕದೇ ಆದರೂ ಅದು ದಾರಿ ತೋರುವ ದಿವ್ಯ ಜ್ಯೋತಿಯಾಗುತ್ತದೆ. ಬದುಕಿನ ದಾರಿ ತೋರಲು ದಿವ್ಯ ಜ್ಯೋತಿಯೇ ಬೇಕಾಗುತ್ತದೆ. ದಿವ್ಯ ಎನ್ನುವ ಪದ ಮತ್ತೆ ದೈವದೊಲುಮೆಯ ಕೃಪೆಯ ಅಗತ್ಯತೆಯನ್ನು ತೋರಿಸುತ್ತದೆ. ಬದುಕಿನ ಸಂಕಷ್ಟದಲ್ಲಿ ಬೆಂದು ಎಲ್ಲವೂ ಮುಗಿದಂತಾದಾಗ ದಿವ್ಯದ ಯೋಚನೆ ಮಾಡುವುದು ಮಾನವ ಸ್ವಭಾವವಾಗಿದೆ. ಇಂತಹ ಬೆಳಕು ಮುಂದೆ ಬರಲಿದೆ, ಬದುಕಿನಲ್ಲಿ ಭರವಸೆ ಇರಲಿ ಎಂಬುದು ಕವಿಯ ಆಶಯವಾಗಿದೆ. ಬದುಕಿನ ಸುದೀರ್ಘ ಪಯಣದಲ್ಲಿ ಹಳ್ಳ ದಿಬ್ಬಗಳನ್ನು ಏರಿಳಿಯುವ ನೂರಾರು ಪ್ರಸಂಗಗಳಿರುತ್ತವೆ. ದಣಿವಾರಿಸಲು ಹಳ್ಳದ ತಿಳಿನೀರು ಸದಾ ನಿನ್ನೊಂದಿಗಿರುತ್ತದೆ ಎಂಬ ಧ್ವನಿ ಇಲ್ಲಿ ಸ್ಪಷ್ಟವಾಗಿದೆ. ಹಳ್ಳದ ತಿಳಿನೀರು ದಾಹವನ್ನು ತಣಿಸುವ ಸಿಹಿ ನೀರೂ ಆಗಿರುತ್ತದೆ. ಹಳ್ಳ ಚಿಕ್ಕದೇ ಆದರೂ ಅದು ವರ್ಷದುದ್ದಕ್ಕೂ ನಿರಂತರವಾಗಿ ಹರಿದು ಜೀವ ಜಾಲವನ್ನು ಪೋಷಿಸುತ್ತದೆ. ನಾಗಯ್ಯನವರ ಬಾಲ್ಯದ ಹಳ್ಳಿಯ ಪರಿಸರದ ಚಿತ್ರಣ ಇಲ್ಲಿ ಅವರ ಕಾವ್ಯದಲ್ಲೂ ಒಡಮೂಡಿದೆ. ಅವರ ಊರಿನ (ಮನೆಯ) ಪಕ್ಕದಲ್ಲಿ ಹರಿಯುತ್ತಿದ್ದ 'ಮಲೆಯಮ್ಮನ ಸರ' ಎಂಬ ಹಳ್ಳ ಬೇಸಗೆಯಲ್ಲೂ ತುಂಬಿ ಹರಿಯುತ್ತಿದ್ದುದನ್ನು ಅದರ ಸೊಬಗನ್ನೂ, ಅವರು ತಮ್ಮ ಇತರ ಸಾಹಿತ್ಯದಲ್ಲೂ ಚಿತ್ರಿಸಿದ್ದಾರೆ. ಬದುಕಿನ ಅನುಭವಗಳು ಕಾವ್ಯದಲ್ಲಿ ಕಲಾತ್ಮಕವಾಗಿ ಅರಳುವುದು ಹೀಗೆಯೇ.

ಮೂರನೆಯ ಹಾಗೂ ಕೊನೆಯ ಚರಣ ಇಡೀ ಸಮುದಾಯವನ್ನು ಉದ್ದೇಶಿಸಿ ಮಾತನಾಡುತ್ತಿದೆ ಎಂಬಂತಿದೆ. ಕವಿ ಇಲ್ಲಿ ಇಡೀ ಜೀವ ಜಾಲ ನಿನ್ನೊಂದಿಗಿದೆ ಎನ್ನುವ ಆಶಯವನ್ನು ವ್ಯಕ್ತಪಡಿಸುತ್ತಾರೆ. ಭರವಸೆಯ ಅಂಚನ್ನೂ ಸ್ಪರ್ಶಿಸಿ ಇದು ಅತಿರೇಕವಲ್ಲ ಎಂಬುದನ್ನೂ ಹೇಳುತ್ತಾರೆ. ಕಡಿದ ಮರದ ಉಪಮೆ ಫೀನಿಕ್ಸ್ ಪಕ್ಷಿಯನ್ನು ನೆನಪಿಸುತ್ತದೆ. ಹಸಿರುಕ್ಕಿಸುವುದೇ ಆದ್ಯ ಕರ್ತವ್ಯ ಎಂಬಂತೆ, ಕಡಿದ ಮರವೂ ಕೂಡಾ ತನ್ನ ಅಸ್ತಿತ್ವಕ್ಕಾಗಿ ಕೊನೆಯವರೆಗೂ ಹೋರಾಡುವ ಪರಿಯನ್ನು ಅದ್ಭುತವಾಗಿ ಚಿತ್ರಿಸುತ್ತಾರೆ. ಅದು ನನ್ನ ವೈಯಕ್ತಿಕ ಬೆಳವಣಿಗೆ ಮಾತ್ರವಲ್ಲ. ಇಡೀ ಭೂಮಿಗೆ ಜೀವ ತುಂಬುವ, ಹಸಿರುಕ್ಕಿಸುವ, ಸಕಲ ಜೀವರಾಶಿಗೆ ಆಶ್ರಯ ನೀಡುವ ಬಗೆಯಾಗಿ ತೋರುತ್ತದೆ. ಇಲ್ಲಿ ವ್ಯಕ್ತಿ ಬೆಳವಣಿಗೆ ಮಾತ್ರವಲ್ಲದೆ ಸಮಷ್ಟಿಯ ಬೆಳವಣಿಗೆಯ ದೃಷ್ಟಿಕೋನವೂ ವ್ಯಕ್ತವಾಗುತ್ತದೆ. ಇದೊಂದು ಶ್ರೇಷ್ಠ ಮನಸ್ಸಿನ, ಹೃದಯದ ಆಶಯವಾಗಿದೆ. ಮುಂದೆ ಬರಲಿರುವ ನೆಮ್ಮದಿಯ ನಾಳೆಗಳಿಗೆ ಇದು ಸೂಚನೆಯನ್ನು ನೀಡುತ್ತದೆ ಎಂಬ ಉದಾತ್ತ ನಂಬಿಕೆಯಿಂದ ಪದ್ಯ ಮುಗಿಯುತ್ತದೆ. ಓದುಗನಲ್ಲಿ ಭರವಸೆಯನ್ನೂ, ಚೈತನ್ಯವನ್ನೂ, ಜೀವ ಪ್ರೀತಿಯನ್ನೂ, ಕಾವ್ಯ ಪ್ರೇಮವನ್ನೂ ಬಿತ್ತುತ್ತದೆ. ಇದು ಶ್ರೇಷ್ಠ ಕವಿಯ, ಕಾವ್ಯದ ಮೂಲೋದ್ದೇಶವೂ ಆಗಿರುತ್ತದೆ, ಆಗಿದೆ.

ರಸಗ್ರಹಣ ಎನ್ನುವುದು ಅವರವರ ಬುದ್ದಿ ಭಾವಗಳಿಗೆ ಅನುಸಾರವಾಗಿ ಇರುತ್ತದೆ. ಒಂದು ಪದ್ಯ ಪ್ರತಿಯೊಬ್ಬ ಓದುಗನಲ್ಲೂ ವಿವಿಧ ಸ್ತರದ ಭಾವಗಳನ್ನೂ, ಸಂತೋಷವನ್ನೂ ತರುವ ಸಾಧ್ಯತೆ ಇರುತ್ತದೆ. ಕವಿಯ ಮೂಲ ಭಾವಗಳು ಓದುಗನಲ್ಲೂ ಅದೇ ಭಾವಗಳನ್ನು ಉತ್ಪತ್ತಿ ಮಾಡಿದರೆ ಓದುಗನೂ ಕವಿಯೇ ಆಗುತ್ತಾನೆ. ಅನೇಕ ವೇಳೆ ಕವಿ ಹೇಳುವ ಅರ್ಥಕ್ಕಿಂತ ಭಿನ್ನವಾದ, ಉದಾತ್ತವಾದ ಭಾವಗಳು ಓದುಗನಲ್ಲಿ ಮೂಡುವ ಸಾಧ್ಯತೆ ಇರುತ್ತದೆ. ಇಂತಹ ಕವಿತೆಗಳೇ, ಕಾವ್ಯಗಳೇ ಎಲ್ಲ ಕಾಲಕ್ಕೂ ಸಲ್ಲುವ ಕಾವ್ಯಗಳಾಗುತ್ತವೆ. ಕಾಲಾತೀತವಾಗಿ ಚಿರಂಜೀವಿಗಳಾಗಿ ಉಳಿಯುತ್ತವೆ. ಶತಮಾನಗಳೇ ಕಳೆದರೂ ಅವುಗಳ ಕುರಿತಾದ ಓದು, ಚರ್ಚೆ ನಿಲ್ಲುವುದಿಲ್ಲ. ಕನ್ನಡಿಗರ ಪುಣ್ಯವೆಂದರೆ ಅಂತಹ ಶ್ರೇಷ್ಠ ಕಾವ್ಯಧಾರೆ ನಮ್ಮಲ್ಲಿ ಎಷ್ಟು ಸವಿದರೂ ಮುಗಿಯದ ಗಂಗಾ ಜಲದಂತಿದೆ. ಹಿಮನಾ ಅವರು ನಮ್ಮ ನಡುವಿನ ಒಬ್ಬ ಸಹೃದಯೀ ಕವಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಮಳೆಯಲಿ

ಸಮವಸ್ತ್ರವ ಧರಿಸಿ
ಹೆಗಲಿಗೆ ಬ್ಯಾಗ್ ಏರಿಸಿ
ಕೈಯಲಿ ಛತ್ರಿ ಹಿಡಿದು
ಹೊರಟರು ಗೆಳೆಯರ ಜೊತೆಗೂಡಿ

ಶಾಲೆಯ ಪಕ್ಕ ಹರಿಯುತಿದೆ ಹಳ್ಳ
ದಾಟಲೇ ಬೇಕು ಕಾಡಿನ ಹಾದಿ
ಜೊತೆಗಾರರಿರಲು ಭಯವಿಲ್ಲ
ಮಳೆಯಲಿ ನಡೆದರು ಮಕ್ಕಳು

ಮಳೆಗೆ ರಸ್ತೆ ಅಕ್ಕ ಪಕ್ಕ ಬೆಳೆದಿದೆ ಹುಲ್ಲು
ಮಣ್ಣು ರಸ್ತೆಯ ಮೇಲೇ ಮಕ್ಕಳ ನಡಿಗೆ
ದೂರದವರೆಗೂ ನಡೆದು ಹೋಗಲೇ
ಬೇಕು
ವಿದ್ಯೆ ಕಲಿತು ಜ್ಞಾನ ಸಂಪಾದಿಸಬೇಕು.

– ಸುವರ್ಣಾ ಭಟ್ಟ.

### ಶಾಲೆಯ ಹಾದಿ



ನೀಲಿ ಬಿಳಿಯ,
ಸಮವಸ್ತ್ರವ ಧರಿಸಿ,
ನಭದೆತ್ತರದ ವೃಕ್ಷ,
ರಾಶಿಯನು ಬಳಸಿ,
ಸಾಗುತ್ತಿದ್ದೆವು ಮಣ್ಣಿನ,
ಹಾದಿಯನು ಸವೆಸಿ.
ಅಣ್ಣ ತಂಗಿ ಅಕ್ಕ ತಮ್ಮ,
ಸಖಸಖಿಯ ಅನುಸರಿಸಿ.

ಬೆನ್ನಲಿ ಭಾರದ ಚೀಲ,
ಛತ್ರಿಯು ಕೈಯಲ್ಲಿ,
ಪ್ರತಿ ನಿತ್ಯವು ವೇಗದಿ,
ಹೆಜ್ಜೆಯ ಹಾಕುತಲಿ ,
ಶಾಲೆಯನು ಬೇಗನೆ,
ಸೇರಲು ತವಕಿಸುತಲಿ,
ಗಾಳಿ ಮಳೆ ಬಂದರೂ
ಜೊತೆ ನಡೆಯುತಲಿ

ಬೀಸಲು ಜೋರಾಗಿ,
ಸುಂಟರ ಗಾಳಿಯು,
ತಿರುವು ಮುರುವಾಗಿ
ಹಾರಿತು ಕೊಡೆಯು,
ಮಕ್ಕಳು ಛತ್ರಿಯ,
ಹಿಂದೆಯೇ ಓಡಿ,
ನೆನೆಯುತ ಕುಣಿದರು,
ಮಳೆಯಲಿ ನೀರಾಡಿ.

– ಮಮತಾ ಶೃಂಗೇರಿ
ಕೊಪ್ಪ, ಚಿಕ್ಕಮಗಳೂರು

### ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

01–07–2025 – ಮಂಗಳವಾರ

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂ.ಫಾಲ್ಗುಣ |
| ಯೋಗ | : ವ್ಯತಾಪತಾ |
| ಕರಣ | : ತೈತುಲ |
| ಸೂರ್ಯೋದಯ | : 05:46:04 |
| ಸೂರ್ಯಾಸ್ತ | : 19:15:36 |
| ರಾಹು ಕಾಲ | : 15:53–17:34 |
| ಯಮಘಂಡ ಕಾಲ | : 09:08–10:53 |
| ಗುಳಿಕ ಕಾಲ | : 12:31:14:12 |

### ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 30–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1623.53 ಅಡಿ |
| ಒಳ ಹರಿವು | 50605 ಕ್ಯುಸೆಕ್ |
| ಹೊರ ಹರಿವು | 204 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 41.795 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1582.48 ಅಡಿ |
| ಒಳ ಹರಿವು | 5790 ಕ್ಯುಸೆಕ್ |
| ಹೊರ ಹರಿವು | 296 ಕ್ಯುಸೆಕ್ |
| ಸಾಮರ್ಥ್ಯ | 5.790 ಟಿಎಂಸಿ |

For Advertisements
Contact: 9448633038

# ಪ್ಲಾಸ್ಟಿಕ್ ಬಳಸಬೇಡಿ ಎನ್ನುವುದಕ್ಕಿಂತ ತಯಾರಿಕೆ ನಿಲ್ಲಿಸಲಿ ಪ್ಲಾಸ್ಟಿಕ್ ನುಂಗಬೇಡಿ ಅಂಥ ಮೂಕಪ್ರಾಣಿಗಳಿಗೆ ಹೇಳೋರ್ಯಾರು?



ಈ ನೆಲದ ಮೇಲೆ ಜೀವನ ನಡೆಸುವ ಕೋಟ್ಯಾಂತರ ಜೀವಿಗಳು ವಿಕಾಸ ಜೊತೆಯಲ್ಲಿ ಅಳಿವು ಉಳಿವನ್ನು ಹೊಂದುತ್ತ ಮನುಷ್ಯನ ಜೊತೆಯಲ್ಲಿ ಪ್ರಕೃತಿಯಲ್ಲಿ ಬದುಕಿವೆ. ಮನುಷ್ಯನಾದಿಯಾಗಿ ಎಲ್ಲ ಜೀವಿಗಳು ತಾವು ಉಣ್ಣುವಾಗ ಉಡುವಾಗ ಮಲಗುವಾಗ ಒಂದಲ್ಲ ಒಂದು ನೆಲೆಯಲ್ಲಿ ತ್ಯಾಜ್ಯವನ್ನು ಉತ್ಪಾದಿಸುತ್ತವೆ. ಇದನ್ನು ನಾವು ಸಾಮಾನ್ಯವಾಗಿ ಕಸ ಅಂತ ಹೇಳಬಹುದು. ಮನುಷ್ಯನನ್ನು ಬಿಟ್ಟು ಉಳಿದ ಜೀವಿಗಳು ಪ್ರಕೃತಿದತ್ತವಾದ ವಸ್ತಗಳನ್ನೇ ಕಸವಾಗಿ ಹೊರ ಹಾಕುತ್ತವೆ ಅದು ಅದರಲ್ಲಿಯೇ ಕರಗಿ ಮಣ್ಣಿಲ್ಲಿ ಸತ್ವವನ್ನು ತುಂಬುತ್ತದೆ. ಆನೆಯೊಂದು ಕಬ್ಬು ತಿಂದು ಅದರ ಸಿಪ್ಪೆಯನ್ನು ನೆಲಕ್ಕೆ ಚೆಲ್ಲಿದರೆ ಮುಂದೆ ಅದು ಪಂಚಭೂತಗಳಲ್ಲಿ ಒಂದಾಗಿ ಹೋಗುತ್ತದೆ.

ನಾವು ಇಲ್ಲಿ ಯೋಚಿಸಬೇಕಾದದ್ದು ಮನುಷ್ಯನ ಕಸದ ಚರಿತ್ರೆಯನ್ನು. ಕಸ ಅಂದ ಕೂಡಲೇ ತ್ಯಾಜ್ಯ, ಬೇಡವಾದ ವಸ್ತು, ಬಳಸಿದ್ದು, ಒಡೆದು ಹೋದದ್ದು, ಉಪಯೋಗಕ್ಕೆ ಬಾರದ್ದು ಎಂದೆಲ್ಲ ಕರೆಯುವುದಿದೆ. ಜೀವನ ಮಾಡುವುದಕ್ಕೆ ಮನುಷ್ಯ ಕಲಿತ ತರುವಾಯ ಕಸ ಅವನ ಜೊತೆಯಲ್ಲಿ ಹುಟ್ಟುಕೊಳ್ಳುವುದಕ್ಕೆ ಶುರುವಾಯಿತು. ಅನ್ನವನ್ನು ಎಲೆಯಲ್ಲಿ ಉಂಡ ನಂತರ ಎಲೆಯನ್ನು ನೆಲಕ್ಕೆ ಎಸೆಯಬೇಕಾಯಿತು. ಭತ್ತವನ್ನೋ ಇನ್ನಾವುದೋ ಪದಾರ್ಥವನ್ನು ಸಂಗ್ರಹಿಸಲು ಮಾಡಿಕೊಂಡ ಹುಲ್ಲಿನ, ಮಣ್ಣಿನ, ಮರದ ಸಾಧನಗಳೆಲ್ಲ ಕೆಲವು ಕಾಲದ ನಂತರದಲ್ಲಿ ಸತ್ವವನ್ನು ಕಳೆದುಕೊಂಡು ಬಳಕೆಗೆ ಬಾರದೆ ಇದ್ದಾಗ ಅದನ್ನು ಎತ್ತಿ ಒಲೆಗೋ, ಮರದ ಬುಡಕ್ಕೋ, ಬಯಲಿಗೋ ಎಸೆಯುತ್ತಿದ್ದರೂ ಅದು ಮಣ್ಣಿನಲ್ಲಿ ಕೂಡಿಕೊಂಡು ತನ್ನ ತನವನ್ನು ಕಳೆದುಕೊಳ್ಳುತ್ತಿತ್ತು ಕಾರಣ ಅದು ಪ್ರಕೃತಿ ಅಂಶವೇ ಆಗಿತ್ತು.

ಕಾಲ ನಡೆದಂತೆ ಮನುಷ್ಯನ ಚಟುವಟಿಕೆಯು ಬಹುಸ್ತರಕ್ಕೆ ಪಲ್ಲಟವಾಗಿ ಅವನು ಪ್ರಕೃತಿಯನ್ನು ಮೀರಿ ನಡೆಯುವುದಕ್ಕೆ ಯೋಚಿಸಿದ ಅದನ್ನೆ ಶೋಧನೆ ಅಂತ ನಾವು ಹೆಮ್ಮೆಯಿಂದ ಕರೆದುಕೊಂಡೆವು, ಬೀಗಿದೆವು ಇದರ ಫಲವಾಗಿ ಕಬ್ಬಿಣ, ಚಿನ್ನ, ಬೆಳ್ಳಿ, ಕಂಚು ಇತ್ಯಾದಿ ಲೋಹಗಳ ವಸ್ತಗಳು ನಮ್ಮ ದೈನಂದಿನ ಬದುಕಿಗೆ ಸೇರಿಕೊಂಡು ಸಂಸ್ಕೃತಿಯನ್ನು ಹುಟ್ಟು ಹಾಕಿದವು. ಈ ಸಂಸ್ಕೃತಿಯು ಬಹುಕಾಲ ಜನರ ಜೀವನ ಮೀಮಾಂಸೆಯನ್ನು ಅಪ್ಪಿಕೊಂಡು ನಡೆದರೂ ಆಧುನಿಕತೆಯ ಪರಂಪರೆಯೊಂದಿಗೆ ಸ್ಪರ್ಧಿಸಿ ನಿಲ್ಲುವುದಕ್ಕೆ ಸಾಧ್ಯವಾಗಲ್ಲಿ. ಪ್ರಕೃತಿಯ ವಸ್ತಗಳೊಂದಿಗೆ ಜೀವನವನ್ನು ಜತನವಾಗಿಸಿಕೊಂಡಿದ್ದ ನಾವು ಮೆಲ್ಲಗೆ ಕೈಗಾರಿಕೆಯ ಉತ್ಪಾದಿತ ವಸ್ತಗಳ ಕಡೆಗೆ ಹೆಜ್ಜೆ ಹಾಕಿದೆವು. ನಮ್ಮ ನಿತ್ಯ ಬಳಕೆಯ ವಸ್ತುವಿನಿಂದ ಹಿಡಿದು ದ್ರವ, ಘನ, ಅನಿಲದಂತಹ ಎಲ್ಲ ಪದಾರ್ಥಗಳನ್ನು ಅಂಗಡಿಯಿಂದ, ಮಾಲಿನಿಂದ ಮನೆಗೆ ಕೊಂಡು ಹೋಗುವುದಕ್ಕೆ, ಸಂಗ್ರಹಿಸುವುದಕ್ಕೆ ಪ್ಲಾಸ್ಟಿಕ್, ಪಾಲಿಥಿಲೀನ್, ಪಿವಿಸಿ, ಎಲ್ಡಿಪಿಇ, ಪಿಪಿ, ಪಿಎಸ್ ಇತ್ಯಾದಿ ರಾಸಾಯನಿಕದಿಂದ ರೂಪಿಸಿದ ವಸ್ತುಗಳನ್ನು ಬಳಸುವುದಕ್ಕೆ ಆರಂಭಿಸಲಾಯಿತು. ಜಗತ್ತಿನ ಬಹುತೇಕ ಕೈಗಾರಿಕೆಗಳು ಇಂತಹ ವಸ್ತುಗಳನ್ನು ಉತ್ಪಾದಿಸಿ ಮಾರುಕಟ್ಟೆಗೆ ತಲುಪಿಸಿ ಲಾಭವನ್ನು ಗಳಿಸುವುದಕ್ಕೆ ನಿಂತವು; ಇತ್ತ ಜಗತ್ತಿನ ಬಹುಪಾಲು ಜನರು ಪ್ರಕೃತಿದತ್ತವಾದ ಮನೆ–ಮಠ, ಲೋಟ–ತಟ್ಟೆ, ಮಡಿಕೆ–ಕುಡಿಕೆ, ಬುಟ್ಟಿ–ತಟ್ಟಿ ಇತ್ಯಾದಿ ವಸ್ತುಗಳ ಬಳಕೆಯನ್ನು ಕೈಬಿಟ್ಟು ಪ್ಲಾಸ್ಟಿಕ್‌ನ ಸಂಬಂಧಿತ ವಸ್ತುಗಳನ್ನೇ ಕೊಳ್ಳುವ ಮತ್ತು ಬಳಸು ಕಡೆಗೆ ನಡೆದರು ಈ ನಡೆಯೇ ಅವರಿಗೆ ಆಪ್ತ ಅನ್ನಿಸಿತು. ಈ ನಡುವೆ ಜನ ಸಂಖ್ಯೆಯು ಹೆಚ್ಚಾಯಿತು ಮನೆಗಳು ಅಧಿಕವಾದವು. ದಿನ ಬಳಕೆಯ ವಸ್ತುಗಳು, ಕೊಳ್ಳುವ, ಕೊಂಡು ಹೋಗುವ, ಸಂಗ್ರಹಿಸುವ ಸಾಧನಗಳು ಅಗತ್ಯತೆಯು ಉಂಟಾಯಿತು. ಈ ಅಗತ್ಯತೆಯನ್ನು ಪ್ಲಾಸ್ಟಿಕ್ ವಸ್ತುಗಳು ಪೂರೈಕೆ ಮಾಡಿದವು. ನಮ್ಮ ದೈನಂದಿನ ಬದುಕಿನಲ್ಲಿ ಎಂಬತ್ತು ಶೇಕಡದಷ್ಟು ಬಗೆ ಬಗೆಯ ಪ್ಲಾಸ್ಟಿಕ್ ಪದಾರ್ಥವನ್ನು ಬಳಸುತ್ತಿದ್ದೇವೆ ಅನ್ನೋ ಅರಿವು ನಮಗಿಲ್ಲ, ತಿಂಡಿಯಿಂದ ಹಿಡಿದು ಉಡುವ ಸೀರೆ ಬಟ್ಟೆಯಾಗಲಿ; ಮಕ್ಕಳ ಆಡುವ ಗೊಂಬೆ ಇರಲಿ; ಮಾರುಕಟ್ಟೆಯ ತರಕಾರಿ, ಮೀನು, ಮಾಂಸವಾಗಲಿ; ಹುಟ್ಟಿದ ಮಗುವಿಗೆ ತರುವ ತೊಟ್ಟಿಲು, ಸತ್ತ ಹೆಣಕ್ಕೆ ಹಾಕುವ ಹಾರ ಎಂಬುವುದೆಲ್ಲ ಒಂದಲ್ಲ ಒಂದು ಬಗೆಯ ಪ್ಲಾಸ್ಟಿಕ್ ಕವರ್‌ಗಳಿಂದ ಪ್ಯಾಕ್ ಮಾಡಿದ್ದೆ ಆಗಿರುತ್ತದೆ. ಅಂಗಡಿಯನು ಒಂದು ವೇಳೆ ನಾವು ಕೊಳ್ಳುವ ಸಾಮಗ್ರಿಯನ್ನು ಹಾಗೆಯೇ ಕೊಟ್ಟರೆ ಅಥವಾ “ಚೀಲ ತಂದಿಲ್ಲವೆ” ಅಂತ ಹೇಳಿದರೆ ನಮ್ಮಗೆ ಕೋಪ ಬಿಗುವಾಗಿ “ಪ್ಲಾಸ್ಟಿಕ್ ಇಲ್ಲದಿದ್ದರೆ ಅಂಗಡಿ ಏಕೆ ಇಟ್ಟಿದ್ದೀರಿ ಬಾಗಿಲು ಮುಚ್ಚಿ” ಅನ್ನೋ ನಾವುಗಳು ಈ ಪ್ಲಾಸ್ಟಿಕ್ ಸಾಧನಗಳಿಗೆ ಎಷ್ಟು ಅಂಟಿಕೊಂಡಿದ್ದೇವೆ ಅನ್ನೋದು ತಿಳಿಯುತ್ತೆ.



ಡಾ. ಸುಬ್ರಹ್ಮಣ್ಯ ಸಿ ಕುಂದೂರು
ಮಂಗಳೂರು

Scan For Digital Colourful
HAMPI TIMES E-paper

ಪ್ರಕೃತಿಯ ಬೀಳು, ಬೆತ್ತ, ಬಿದಿರು, ಎಲೆ, ಮರಗಳಿಂದ ರೂಪಿಸಿಕೊಂಡ ವಸ್ತುಗಳನ್ನು ಹೇಗೆ ಉಪಯೋಗಿಸಬೇಕು ನಂತರ ಮುರಿದು, ಸವೆದು ಹೋದ ಮೇಲೆ ಅದನ್ನು ಮತ್ತೆ ಪ್ರಕೃತಿಗೆ ಹಾಕಿದರೆ ಅದು ಮಣ್ಣಿನಲ್ಲಿ ಲೀನವಾಗುತ್ತದೆ ಅನ್ನೋ ತಿಳುವಳಿಕೆ ಮನುಷ್ಯನಲ್ಲಿ ಇತ್ತು ಕಾರಣ ಅವನು ಈ ಪ್ರಕೃತಿಯ ಜೀವಿಯೇ ಆಗಿದ್ದ ಆದರೆ ಕೈಗಾರಿಕೆಗಳು ಹುಟ್ಟು ಹಾಕಿದ ರಾಸಾಯನಿಕ ಸಂಯೋಜನೆ ವಿಭಿನ್ನ ಮಾದರಿ ದಿನ ಬಳಕೆಯ ವಸ್ತಗಳನ್ನು ಬಳಸಿದ ನಂತರ ಏನು ಮಾಡಬೇಕು?. ಅದನ್ನು ಮತ್ತೆ ಲೀನವಾಗಿಸುವುದು ಹೇಗೆ? ಕಸವಾದ ಪ್ಲಾಸ್ಟಿಕ್ ಅನ್ನು ಕೊಂಡು ಎಲ್ಲಿ ಹಾಕುವುದು, ಅದು ಎಲ್ಲಿ ಕರಗುತ್ತದೆ ಅನ್ನೋ ಯಾವ ತಿಳುವಳಿಕೆಯನ್ನು ಪ್ಲಾಸ್ಟಿಕ್ ಉತ್ಪಾದಿತ ಕಂಪನಿಯು ಹೇಳಿಲ್ಲ, ಹೇಳುವಂತೆ ನಾವಾಗಲಿ, ಸರ್ಕಾರವಾಗಲಿ ಕೇಳಿಲ್ಲ. ಈ ನಡುವೆ ಭಾರತದಲ್ಲಿನ ನೂರ ಮೂವತ್ತು ಕೋಟಿ ಜನರು ದಿನದಲ್ಲಿ ಒಂದು ಪ್ಲಾಸ್ಟಿಕ್ ಬಳಸಿ ಅದನ್ನು ನೆಲಕ್ಕೆ ಎಸೆದರೆ ವರ್ಷಕ್ಕೆ ಈ ಭೂಮಂಡಲದಲ್ಲಿ ಸಂಗ್ರಹವಾಗುವ ಪ್ಲಾಸ್ಟಿಕ್ ವಸ್ತಗಳ ಪ್ರಮಾಣ ಎಷ್ಟಾಗಬಹುದು ಯೋಚಿಸಿ. ಈ ಪ್ಲಾಸ್ಟಿಕ್‌ನ ಕುಟುಂಬಗಳು ಮನಷ್ಯನ ದೇಹದ ಸತ್ವನ್ನು ಕಳೆದು ಅವನ ಬದುಕಿನ ಗುಣಮಟ್ಟವನ್ನೆ ಕಳೆದಿದೆ, ಭೂಮಿಯ ಮೈಯಲ್ಲಿ ಹರಡಿಕೊಂಡು ನೀರು, ಗಾಳಿ, ಬೆಳಕು ನಡೆಯದಂತೆ ಮಾಡಿ ಭೂಮಂಡಲವನ್ನು ಮಾಲಿನ್ಯ ವಾಗಿಸಿದೆ. ನಮ್ಮ ಜೊತೆಯಲ್ಲಿ ಬದುಕು ನಡೆಸುವ ನಾಯಿ, ಬೆಕ್ಕು, ಜಾನುವಾರು ಗಳಾದಿಯಾಗಿ ಅನೇಕ ಪ್ರಾಣಿಗಳು ಪ್ಲಾಸ್ಟಿಕ್ ಉತ್ಪನ್ನಗಳನ್ನು ಉಂಡು ರೋಗಕ್ಕೆ ಸಿಕ್ಕು ಬಲಿಯಾಗುತ್ತವೆ. ಭೂಮಿಯ ತಾಪಮಾನವು ಏರಿಕೆಯಾಗುತ್ತಿದೆ ಇಂತಹ ಕ್ರೂರವಾದ ಸಮಸ್ಯೆಗಳು ನಮ್ಮ ಎದುರಿನಲ್ಲಿ ಇದ್ದರೂ ನಾವು ಪ್ಲಾಸ್ಟಿಕ್ ಬಳಸುತ್ತೇವೆ, ಕಂಪನಿಗಳು ಉತ್ಪಾದಿಸುತ್ತಿವೆ, ಸರ್ಕಾರಗಳು ಪ್ಲಾಸ್ಟಿಕ್ ತಯಾರಿಕೆಯನ್ನೇ ನಿಲ್ಲಿಸುವ ಯೋಚನೆಯನ್ನು ಮಾಡುತ್ತಿಲ್ಲ ಎನ್ನುವುದೇ ಪ್ಲಾಸ್ಟಿಕ್ ನಮ್ಮ ನಡುವೆ ವ್ಯಾಪಿಸುವುದಕ್ಕೆ ಸಾಧ್ಯವಾಗಿದೆ.

ಭಾರತದಂತಹ ದೇಶದಲ್ಲಿ ದುಡಿಯುವ ಮತ್ತು ಮಧ್ಯಮ ವರ್ಗದ ಜನರೇ ಹೆಚ್ಚಿರುವುದರಿಂದ ದಿನ ಬಳಕೆಗೆ ಕಡಿಮೆ ಬೆಲೆಗೆ ಸಿಗುವ ವಸ್ತುಗಳನ್ನೇ ಕೊಳ್ಳುತಾರೆ ಮತ್ತು ಬಳಸುತ್ತಾರೆ, ಬಿಸಾಕುತ್ತಾರೆ. ಪ್ಲಾಸ್ಟಿಕ್ ವಿಭಿನ್ನ ವಿನ್ಯಾಸದಲ್ಲಿ ನೂರಾರು ಬಗೆಯ ವಸ್ತುಗಳನ್ನು ಹೊಂದಿದೆ, ಬೆಲೆಯು ಕಮ್ಮಿ, ಉಪಯೋಗ ಹೆಚ್ಚಾದ ಕಾರಣದಿಂದ ನಮಗೆ ಚರ್ಮದಷ್ಟೇ ಬಿಗುವಾಗಿ ಪ್ಲಾಸ್ಟಿಕ್ ಅಂಟಿರುವುದು ಸತ್ಯವಾಗಿದೆ. ನಮ್ಮ ಬದುಕಿನಿಂದ ಇದನ್ನು ದೂರವಾಗಿಸಬೇಕು ಮನುಕುಲವನ್ನು ಮುಂದೆ ಜೀವಿಸುವಂತೆ ಮಾಡಬೇಕು ಮತ್ತು ಈ ಭೂಮಂಡಲವನ್ನು ಉಳಿಸಬೇಕಾದರೆ ಮುಖ್ಯವಾಗಿ ಸರ್ಕಾರ ಪ್ಲಾಸ್ಟಿಕ್ ಉತ್ಪನ್ನಗಳ ಬೆಲೆಯನ್ನು ದುಬಾರಿ ಮಾಡಬೇಕು, ಅದನ್ನು ಉತ್ಪಾದಿಸುವ ಕಂಪನಿಯನ್ನು ಮುಚ್ಚಬೇಕು ಮತ್ತು ಮಾರುವ ಬಳಸುವ ನೆಲೆಯಲ್ಲಿ ಬಿಗುವಾಗ ಕಾನೂನು ರೂಪಿಸಬೇಕು. ಪ್ಲಾಸ್ಟಿಕ್ ನಮ್ಮ ಬದುಕಿನಲ್ಲಿ ಬಹುಸ್ತರದಲ್ಲಿ ಬಳಕೆಯಾಗುವ ವಸ್ತುವಾಗಿರುವುದರಿಂದ ಇದರ ಬದಲಿಗೆ ಪ್ರಕೃತಿದತ್ತವಾದ ವಸ್ತಗಳನ್ನು ಹುಟ್ಟು ಹಾಕಿ ಅದು ಜನರಿಗೆ ದಕ್ಕುವಂತೆ, ಕಡಿಮೆ ಬೆಲೆಗೆ ಸಿಗುವಂತೆ, ಎಲ್ಲ ರೀತಿಯ ಉಪಯೋಗಕ್ಕೂ ಬರುವ ವಿನ್ಯಾಸ ಮಾಡಬೇಕು. ‘ನಾವು ಎಷ್ಟೋ ಬಾರಿ ಮಾಲ್‌ಗೆ ಸಾಮಾಗ್ರಿಯನ್ನು ಕೊಳ್ಳುವುದಕ್ಕೆ ಹೋದಾಗ ಕಾಟನ್ ಬ್ಯಾಗ್ ಬೇಕೆ? ಅದರ ಬೆಲೆ ಐದು ರೂ ಅನ್ನುತ್ತಾರೆ. ನಮಗೆ ಐದು ರೂಪಾಯಿ ಕೊಟ್ಟು ಬ್ಯಾಗು ಕೊಂಡು ತರುವುದು ಸಾಧ್ಯವಿಲ್ಲ ಅದನ್ನು ಮನಸ್ಸು ಒಪ್ಪುವುದು ಇಲ್ಲ. ಅದೇ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ ಕೊಡುವಾಗ ಯಾವ ಅಂಗಡಿ–ಮಾಲ್‌ನಲ್ಲೂ ಹಣ ಹೇಳುವುದಿಲ್ಲ ಬೇಕಾದರೆ ಎರಡರಲ್ಲಿ ಆದರೂ ತುಂಬಿಕೊಡುತ್ತಾರೆ’ ಈ ರೀತಿಯ ಪರಿಸರ ಮತ್ತು ಪ್ರಜ್ಞೆ ಬದಲಾಗಬೇಕು ನಾವು ಬದುಕಬೇಕು ಭೂಮಿಯು ಉಳಿಯಬೇಕು ಪ್ಲಾಸ್ಟಿಕ್ ಮುಕ್ತ ಬದುಕಾಗಬೇಕು.

# ಜೆಡಿಎಸ್ ಇನ್ನೊಬ್ಬರ ಹೆಗಲ ಮೇಲೆ ಕೈಹಾಕೊಂಡೇ ಅಧಿಕಾರಕ್ಕೆ ಬರಬೇಕು. ಸ್ವಂತ ಶಕ್ತಿಯಿಂದ ಸಾಧ್ಯವೇ ಇಲ್ಲ: ಸಿ.ಎಂ ವ್ಯಂಗ್ಯ

■ ಹಂಪಿ ಟೈಮ್ಸ್ ಕೆಆರ್‌ಎಸ್

ನಮ್ಮ ಸರ್ಕಾರ ಬಿದ್ದೋಗತ್ತೆ ಅಂತ ಸೋತ ಗಿರಾಕಿಗಳು ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಐದು ವರ್ಷ ಬಂಡೆ ರೀತಿ ಇರತ್ತೆ. 2028 ರಲ್ಲೂ ನಾವೇ ಗೆದ್ದು ಅಧಿಕಾರಕ್ಕೆ ಬರ್ತೀವಿ ಎಂದು ಘೋಷಿಸಿದ ಮುಖ್ಯಮಂತ್ರಿಗಳು ನೀರಾವರಿಗೆ ನಮ್ಮ ಈ ಸರ್ಕಾರ 25 ಸಾವಿರ ಕೋಟಿ ರೂ ಕೊಟ್ಟಿದೆ. ಬೇರೆ ಯಾವ ಸರ್ಕಾರವಾದರೂ ಈ ಮಟ್ಟದ ಅನುದಾನ ಕೊಟ್ಟಿತ್ತಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಕೃಷ್ಣರಾಜಸಾಗರ ಜಲಾಶಯಕ್ಕೆ ಬಾಗಿನ ಅರ್ಪಿಸಿದ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಸೋತ ಗಿರಾಕಿಗಳು ಸರ್ಕಾರ ಬಿದ್ದೋಗತ್ತೆ ಎಂದು ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ. ನನಗೂ , ಆಅಒ ಶಿವಕುಮಾರ್ ಅವರಿಗೂ ಸರಿ ಇಲ್ಲ ಎಂದು ಬುರುಡೆ ಬಿಡುತ್ತಿದ್ದಾರೆ. ನಾನು ಮತ್ತು ಶಿವಕುಮಾರ್ ಇಬ್ಬರೂ ಒಟ್ಟಾಗಿ, ಗಟ್ಟಿಯಾಗಿದ್ದೀವಿ. ನಮ್ಮ ಸರ್ಕಾರವೂ ಐದು ವರ್ಷ ಗ್ಯಾರಂಟಿಯಾಗಿ ಗಟ್ಟಿಯಾಗಿ ಇರುತ್ತದೆ. 2028 ರಲ್ಲೂ ಗೆದ್ದು ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂದು ಘೋಷಿಸಿದರು.

ಅಭಿವೃದ್ಧಿಗೆ ಹಣ ಇಲ್ಲ, ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಬುರುಡೆ ಬಿಡುತ್ತಿರುವ ಬಿಜೆಪಿಯವರು ನಾಡಿನ ಜನರಿಗೆ ಉತ್ತರಿಸಬೇಕು. ದಿವಾಳಿ ಆಗಿದ್ದರೆ 25 ಸಾವಿರ ಕೋಟಿ ರೂಪಾಯಿ ಎಲ್ಲಿಂದ ಬಂತು ಎಂದು ಪ್ರಶ್ನಿಸಿದರು.



ಕೃಷಿ ಪ್ರಗತಿಗಾಗಿ ವರ್ಷಕ್ಕೆ 19000 ಸಾವಿರ ಕೋಟಿ ಪಂಪ್ ಸೆಟ್ ಸಬ್ಸಿಡಿಯನ್ನು ರೈತರಿಗೆ ಕೊಟ್ಟಿದ್ದೇವೆ. 92 ವರ್ಷಗಳ ಬಳಿಕ ಜೂನ್ ತಿಂಗಳಲ್ಲೇ ಭರ್ತಿ ಆಗಿರುವ ಕೆ ಅರ್ ಎಸ್ ನಲ್ಲಿ ಸ್ಮಾರಕ ನಿರ್ಮಿಸಿ ಎಂದು ಕಾವೇರಿ ನಿಗಮದ ಎಂಡಿ ಅವರಿಗೆ ಸಿಎಂ ಸೂಚನೆ ನೀಡಿದರು.

ಕೃಷ್ಣರಾಜಸಾಗರದ ಒಟ್ಟು 124 ಅಡಿ ಸಾಮರ್ಥ್ಯದಲ್ಲಿ 120.90 ಅಡಿ ಭರ್ತಿ ಆಗಿದೆ. ಅಣೆಕಟ್ಟೆಗೆ 49 ಖಿಒಅ ನೀರಿನ ಸಾಮರ್ಥ್ಯವಿದೆ. 193 ವರ್ಷಗಳಲ್ಲಿ 76 ಬಾರಿ ಭರ್ತಿಯಾಗಿದೆ. 2023–24 ರಲ್ಲಿ ಬರಗಾಲವಿತ್ತು. ಈ ಕಾರಣಕ್ಕೇ "ಸಿದ್ದರಾಮಯ್ಯ ಅವರ ಕಾಲುಗುಣ ಚನ್ನಾಗಿಲ್ಲ, ಕಾಂಗ್ರೆಸ್ ಸರ್ಕಾರದ ಕಾಲುಗುಣ ಸರಿಯಿಲ್ಲ" ಎಂದು ವಿರೋಧ ಪಕ್ಷಗಳು ಟೀಕಿಸಿದ್ದವು. ಈಗ ಕಳೆದು ಎರಡು ವರ್ಷಗಳಿಂದ ರಾಜ್ಯದಲ್ಲಿ ಮಳೆ, ಬೆಳೆ ಉತ್ತಮವಾಗಿ ಆಗುತ್ತಿದೆ. ವಿರೋಧ ಪಕ್ಷಗಳು ಮೂಡಾತ್ಮರು ಈಗ ಏನು ಹೇಳ್ತಾರೆ ಎಂದು ಸಿಎಂ ಅಣಕಿಸಿದರು.

ನಾವು ಈ ಬಾರಿ ಕಾವೇರಿ ಅಭಿವೃದ್ಧಿ ನಿಗಮಕ್ಕೆ 3000 ಕೋಟಿ ಹಣ ಕೊಟ್ಟಿದ್ದೇವೆ. ಈಗ ಟೀಕಿಸುತ್ತಿರುವವರು ಅಧಿಕಾರದಲ್ಲಿದ್ದಾಗ ಕಾವೇರಿ ನಿಗಮಕ್ಕೆ ಹಣ ಕೊಡಲಿಲ್ಲ ಎಂದು ಟೀಕಿಸಿದರು.

ಸುಳ್ಳು ಹೇಳುವ ಚಾಳಿಯಲ್ಲಿರುವ ಬಿಜೆಪಿ ಗೆ ರಾಜ್ಯದ ಜನ ಪೂರ್ಣ ಅಧಿಕಾರವನ್ನೇ ಕೊಟ್ಟಿಲ್ಲ. ಆಪರೇಷನ್ ಕಮಲ ಮಾಡಿ ಎರಡು ಬಾರಿ ಅಧಿಕಾರಕ್ಕೆ ಬಂದರು. ಜೆಡಿಎಸ್ ಇನ್ನೊಬ್ಬರ ಹೆಗಲ ಮೇಲೆ ಕೈ ಹಾಕಿಕೊಂಡೇ ಅಧಿಕಾರಕ್ಕೆ ಬರಬೇಕು. ಸ್ವಂತ ಶಕ್ತಿಯಿಂದ ಸಾಧ್ಯವೇ ಇಲ್ಲ ಎಂದರು.

ನಾನು ಸುಳ್ಳು ಹೇಳಿದ್ರೆ ಜನರಿಗೆ ಗೊತ್ತಾಗಲ್ವಾ ? ಅದಕ್ಕೇ ಬಿಜೆಪಿ, ಜೆಡಿಎಸ್ ನವರು ಜನರನ್ನು ದಡ್ಡರೆಂದು ಭಾವಿಸಬಾರದು. ಜನರಿಗೆ ಸುಳ್ಳು ಹೇಳಿ ಹೋಗಬಾರದು. ತಾಯಿ ಕಾವೇರಿಗೆ ಪೂಜೆ ಮಾಡಿ ನಾಡಿನ ಮಳೆ, ಬೆಳೆ ಹೀಗೇ ಚನ್ನಾಗಿ ಆಗಲಿ ಎಂದು ಪ್ರಾರ್ಥಿಸಿದ್ದೇನೆ.

ನಾವು ಅಧಿಕಾರದಲ್ಲಿದ್ದಾಗ ಯಾವಾಗಲಾದರೂ ರೈತರಿಗೆ ಬೀಜ, ಗೊಬ್ಬರಕ್ಕೆ ತೊಂದರೆ ಮಾಡಿದ್ದೇವಾ? ಬೀಜ ಕೇಳಿದವರಿಗೆ ಗೋಲಿಬಾರ್ ಮಾಡಿದ್ದೇವಾ ಎಂದು ಪ್ರಶ್ನಿಸಿದರು.

ಕಾವೇರಿ ತಾಯಿ, ಚಾಮುಂಡೇಶ್ವರಿ ಕೃಪಾಕಟಾಕ್ಷದಿಂದ ರಾಜ್ಯ ಸುಭಿಕ್ಷವಾಗಿದೆ. ಎಲ್ಲಾ ಜಲಾಶಯಗಳೂ ತುಂಬಿವೆ. ಎಲ್ಲಾ ನಾಲೆಗಳಿಗೂ ತಕ್ಷಣದಿಂದ ನೀರು ಹರಿಸಲು ವೇದಿಕೆಯಿಂದಲೇ ಆದೇಶ ನೀಡಿದರು.

ಮೈಕ್ರೋ ನ್ಯೂಸ್

## ಪತ್ನಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಗೆ ಜೀವಾವಧಿ ಶಿಕ್ಷೆ ಪ್ರಕಟ

**ಹಂಪಿ ಟೈಮ್ಸ್ ಕೊಪ್ಪಳ**

ಪತ್ನಿಯ ಕೊಲೆ ಮಾಡಿ 20 ವರ್ಷಗಳ ಕಾಲ ತಲೆಮರೆಸಿಕೊಂಡಿದ್ದ 73 ವರ್ಷದ ಆರೋಪಿಗೆ ಗಂಗಾವತಿಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಜೀವಾವಧಿ ಶಿಕ್ಷೆ ಹಾಗೂ ದಂಡವನ್ನು ವಿಧಿಸಿ ತೀರ್ಪು ಪ್ರಕಟಿಸಿದೆ.

ಆರೋಗ್ಯ ಇಲಾಖೆಯಲ್ಲಿ ಕಿರಿಯ ಆರೋಗ್ಯ ಸಹಾಯಕನಾಗಿದ್ದ ಮಾನ್ವಿ ತಾಲ್ಲೂಕಿನ ಹಾಲ್ದಾಳ ಗ್ರಾಮದ ಹನುಮಂತಪ್ಪ ತಂದೆ ಹುಸೇನಪ್ಪ ಎಂಬ ವ್ಯಕ್ತಿಯು ಗಂಗಾವತಿಯ ಗುಂಡಮ್ಮ ಕ್ಯಾಂಪಿನಲ್ಲಿ ತನ್ನ ಮೂರನೇ ಹೆಂಡತಿಯಾದ ರೇಣುಕಮ್ಮ ಳೊಂದಿಗೆ ವಾಸವಾಗಿದ್ದನು. ತನ್ನ ಹೆಂಡತಿಯ ಶೀಲದ ಬಗ್ಗೆ ಸಂಶಯಪಟ್ಟು 2002ರ ಜೂನ್ 20 ರ ರಾತ್ರಿ ಆಕೆಯ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿ, ಕತ್ತು ಹಿಸುಕಿ ಕೊಲೆ ಮಾಡಿದ್ದನು. ನಂತರ ಸಾಕ್ಷಿ ನಾಶಪಡಿಸುವ ಸಲುವಾಗಿ ಬೇರೆ ಕಡೆ ಶವ ಸಾಗಿಸುವ ಉದ್ದೇಶದಿಂದ ಆಕೆಯ ಶವವನ್ನು ಗೋಣಿ ಚೀಲದಲ್ಲಿ ತುಂಬಿ ಅದನ್ನು ಗಂಗಾವತಿ ಬಸ್ ನಿಲ್ದಾಣದಿಂದ ಸಾರಿಗೆ ಬಸ್‌ನಲ್ಲಿ ಲಗೇಜ್ ರೂಪದಲ್ಲಿ ಶವವನ್ನು ಸಾಗಿಸಿದ್ದನು. ಕಂಪ್ಲಿ ಪಿಎಸ್‌ಐ ಸುಧಾಕರ ಅವರು ಕಂಪ್ಲಿ ಚೆಕ್‌ಪೋಸ್ಟ್‌ನಲ್ಲಿ ಬಸ್ ಚಕಿಂಗ್ ನಡೆಸಿದ್ದು, ಮೂಟೆಯಲ್ಲಿ ಶವವಿರುವುದು ಪತ್ತೆಯಾಗಿ ರುತ್ತದೆ. ಈ ಬಗ್ಗೆ ಬಸ್ ಚಾಲಕ ಗುರುದೇವ ಅವರು ಕಂಪ್ಲಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಅಂದಿನ ತನಿಖಾಧಿಕಾರಿಗಳಾದ ಹೊಸ ಪೇಟೆಯ ಗ್ರಾಮೀಣ ಸಿಪಿಐ (ಪ್ರಭಾರ) ಜಿ.ವಿಶ್ವನಾಥ, ಸಿಪಿಐ ಜಿ.ಜಿ.ಮರಿಬಾಶೆಟ್ಟಿ ಹಾಗೂ ಪ್ರಕರಣವನ್ನು ಸರಹದ್ದಿನ ಆಧಾರದ ಮೇಲೆ ಗಂಗಾವತಿ ನಗರ ಠಾಣೆಗೆ ವರ್ಗಾವಣೆ ಗೊಂಡಿದ್ದರಿಂದ ಅಂದಿನ ತನಿಖಾಧಿಖಾರಿ ಗಂಗಾವತಿ ನಗರಠಾಣೆಯ ಪಿಐ ಬಿ.ಎಸ್.ಶಾಂತಕುಮಾರ ಅವರು ಜಂಟಿಯಾಗಿ ಪ್ರಕರಣದ ತನಿಖೆ ನಡೆಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಲಯದ ವಿಚಾರಣೆಯಲ್ಲಿ ಅಪರಾಧ ಸಾಬೀತಾದ್ದರಿಂದ ಗಂಗಾವತಿಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯ್ಕ ಅವರು, ಆರೋಪಿತನಿಗೆ ಭಾರತೀಯ ದಂಡ ಸಂಹಿತೆ ಕಲಂ 302 ಅಪರಾಧಕ್ಕೆ ಜೀವಾವಧಿ ಶಿಕ್ಷೆ ಹಾಗೂ ರೂ.10,000 ಗಳ ದಂಡವನ್ನು ವಿಧಿಸಿ, ತೀರ್ಪಿನ ದಿನಾಂಕದಿಂದ ಮೂರು ತಿಂಗಳೊಳಗೆ ದಂಡ ಕಟ್ಟದೇ ಇದ್ದಲ್ಲಿ 1 ವರ್ಷ ಸಾದಾ ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸುವಂತೆ ಹಾಗೂ ಕಲಂ 201 ಅಪರಾಧಕ್ಕೆ 3 ವರ್ಷಗಳ ಕಾರಾಗೃಹ ವಾಸದ ಶಿಕ್ಷೆ ಹಾಗೂ ರೂ.5000 ಗಳ ದಂಡವನ್ನು ಮೂರು ತಿಂಗಳೊಳಗೆ ಪಾವತಿಸುವಂತೆ, ತಪ್ಪಿದಲ್ಲಿ 3 ತಿಂಗಳ ಸಾದಾ ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸು ವಂತೆ ಮತ್ತು ದಂಡದ ಮೊತ್ತ ರೂ.15,000 ಗಳನ್ನು ಸರ್ಕಾರಕ್ಕೆ ಭರಿಸುವಂತೆ ಆದೇಶಿಸಿ, ಜೂನ್ 27 ರಂದು ತೀರ್ಪು ಪ್ರಕಟಿಸಿದೆ ಎಂದು ಗಂಗಾವತಿಯ ಸರಕಾರಿ ಅಭಿಯೋಜಕ ರಾದ ನಾಗಲಕ್ಷ್ಮೀ ಎಸ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಕಲಾವಿದರಿಗೆ ಸರ್ಕಾರದ ನೆರವು ಅನಿವಾರ್ಯ

## ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಾತಾ ಬಿ. ಮಂಜಮ್ಮ ಜೋಗತಿ ಹೇಳಿಕೆ। ರಂಗಬಿಂಬ 3ನೆಯ ವಾರ್ಷಿಕೋತ್ಸವ ಉದ್ಘಾಟನೆ

**■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಕಲಾವಿದರ ಜೀವನ ಅತ್ಯಂತ ಕಷ್ಟಕರವಾಗಿದ್ದು, ಅವರ ನೆರವಿಗೆ ಸರ್ಕಾರ ಧಾವಿಸಿದರೆ ಮಾತ್ರ ಬದುಕು ಸುಧಾರಿಸುತ್ತದೆ ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ, ಹಿರಿಯ ಕಲಾವಿದೆ ಮಾತಾ ಬಿ. ಮಂಜಮ್ಮ ಜೋಗತಿ ಅವರು ಅಭಿಪ್ರಾಯಪಟ್ಟರು.



ಇಲ್ಲಿನ ದುರ್ಗಾದಾಸ್ ಕಲಾಮಂದಿರದಲ್ಲಿ ಭಾನುವಾರ ನಡೆದ ರಂಗಬಿಂಬ ಕಲಾತಂಡದ 3ನೇ ವಾರ್ಷಿಕೋತ್ಸವ ಹಾಗೂ 'ಸಂಗ್ಯಾ ಬಾಳ್ಯ' ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. "ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಲಾವಿದರ ಬದುಕಿಗೆ ಹೆಚ್ಚಿನ ಅನುದಾನ ನೀಡಬೇಕು. ಬಡ ಕಲಾವಿದರು ಮತ್ತು ಕಲಾ ಸಂಸ್ಥೆಗಳಿಗೆ ನೆರವು ನೀಡುವ ಮೂಲಕ ರಂಗ ಕಲಾವಿದರನ್ನು ಪ್ರೋತ್ಸಾಹಿಸಬೇಕು. ಆಗ ಮಾತ್ರ ಕಲಾವಿದರು ಮತ್ತು ಕಲೆ ಎರಡನ್ನೂ ಉಳಿಸಲು ಸಾಧ್ಯ" ಎಂದು ಅವರು ಒತ್ತಿ ಹೇಳಿದರು.

**ಮರಿಯಮ್ಮನಹಳ್ಳಿ: ಕಲಾವಿದರ ತವರೂರು!**

ಮರಿಯಮ್ಮನಹಳ್ಳಿ ಬುಡ್ಡೆಕಲ್ಲಿಗೆ ಬಹುಶಃ ಕಲಾವಿದರೇ ಮೊದಲ ಬುನಾದಿ ಹಾಕಿದ್ದಾರೆ ಎನ್ನಬಹುದು. ಹಿಂದೆ ಇಲ್ಲಿ ಮುಂಜಾನೆ ತನಕ ನಾಟಕಗಳು, ಬಯಲಾಟಗಳು ಪ್ರದರ್ಶನಗೊಳ್ಳುತ್ತಿದ್ದವು. ರಂಗಬಿಂಬ ಕಲಾತಂಡವು ಕಳೆದ ಮೂರು ವರ್ಷಗಳಿಂದ ನಾಟಕಗಳು ಸೇರಿದಂತೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಈ ಮೂಲಕ ಕಲೆಯ ಉಳಿವಿಗಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದು ಮಂಜಮ್ಮ ಜೋಗತಿ ಹೇಳಿದರು.

ಆರ್ಯವೈಶ್ಯ ಸಮಾಜದ ಅಧ್ಯಕ್ಷ ಚಿದ್ರಿ ಸತೀಶ್ ಮಾತನಾಡಿ, ಮರಿಯಮ್ಮನಹಳ್ಳಿ ಕಲಾವಿದರ ತವರೂರು ಎಂಬುದನ್ನು ರಂಗಬಿಂಬದಿಂದ ಸಂಗ್ಯಾ ಬಾಳ್ಯ ನಾಟಕ ಪ್ರದರ್ಶನದ ಮೂಲಕ ಮತ್ತೊಮ್ಮೆ ಸಾಬೀತುಪಡಿಸಿದೆ. ಇಲ್ಲಿ ಕಲಾವಿದರು ಬೆಳೆಯಲು ಎಲ್ಲರೂ ಸಹಕಾರ ನೀಡಬೇಕು. ನಾಟಕಗಳನ್ನು ಹೆಚ್ಚಾಗಿ ನೋಡುವ ಮೂಲಕ ಕಲಾವಿದರಕಲೆಗೆನಾವುಗೌರವನೀಡಿದಂತಾಗುತ್ತದೆ"ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತೆ, ಹಿರಿಯ ರಂಗಕಲಾವಿದೆ ಡಾ. ನಾಗರತ್ನಮ್ಮ, ನಾಟಕ ಅಕಾಡೆಮಿ ಸದಸ್ಯ ಶಿವನಾಯಕ ದೊರೆ, ಪಂಚಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ. ಶಿವಮೂರ್ತಿ, ಪಟ್ಟಣ ಪಂಚಾಯಿತಿ ಅಧ್ಯಕ್ಷ ಆದಿಮನಿ ಹುಸೇನ್ ಬಾಷಾ, ಲಲಿತ ಕಲಾರಂಗದ ಉಪಾಧ್ಯಕ್ಷ ಜಿ.ಎಂ. ಕೊಟ್ರೇಶ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ರಂಗಬಿಂಬ ಟ್ರಸ್ಟ್ ಅಧ್ಯಕ್ಷೆ ಎಂ. ಗಾಯತ್ರಿದೇವಿ ಅಧ್ಯಕ್ಷತೆ ವಹಿಸಿದ್ದರು. ಕಲಾವಿದ ಕೆ. ನಾಗೇಶ್ ಸ್ವಾಗತಿಸಿದರು. ರಂಗಬಿಂಬ ಕಾರ್ಯದರ್ಶಿ ಸಿ.ಕೆ. ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಲಾವಿದೆ ಪುಷ್ಪ ಪಿ. ಸರದಾರ ನಿರೂಪಿಸಿ ವಂದಿಸಿದರು.

**ಮನಮುಟ್ಟಿದ 'ಸಂಗ್ಯಾ ಬಾಳ್ಯ' ನಾಟಕ ಪ್ರದರ್ಶನ**

ಕಾರ್ಯಕ್ರಮದ ನಂತರ ನಾಡೋಜ ಡಾ. ಚಂದ್ರಶೇಖರ ಕಂಬಾರ ಅವರು ರಚಿಸಿದ, ಬಿ.ಎಂ.ಎಸ್. ಪ್ರಭು ನಿರ್ದೇಶನದ'ಸಂಗ್ಯಾಬಾಳ್ಯ'ನಾಟಕಪ್ರದರ್ಶನಗೊಂಡಿತು. ನಾಟಕದಲ್ಲಿ ಕಲಾವಿದರಾದ ಸರದಾರ ಬಿ. (ಸಂಗ್ಯಾ), ಮಹಾಂತೇಶ್ ಮಸಾರಿ ನೆಲ್ಲುಕುದುರೆ (ಬಾಳ್ಯ), ಜಿ. ಸೋಮಶೇಖರ್ (ಈರ್ಯ), ನವೀನ್ ಕುಮಾರ್ ಟಿ. (ವಿರೂಪಾಕ್ಷಿ), ಕೊಟ್ರೇಶ್ ಲಕ್ಕಿಮರ (ಬಸವಂತ), ಹೆಚ್. ಮಂಜುನಾಥ (ಮಾರ್ವಾಡಿ), ಅಕ್ಷರ ಎನ್. ದೇವನಕೊಂಡ (ಪೋಸ್ಟ್‌ಮ್ಯಾನ್), ಹುರುಕೊಳ್ಳಿ ಗುರುಪ್ರಕಾಶ್ (ವ್ಯಕ್ತಿ), ಲಕ್ಕಿಮರ ಶಾರದ (ಗಂಗಿ), ಕೆ. ಸರ್ವಮಂಗಳ (ಪಾರವ್ವ) ಅವರು ತಮ್ಮ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರ ಗಮನ ಸೆಳೆದರು.

ಸಂಗೀತದಲ್ಲಿ ಹಾರ್ಮೋನಿಯಂ– ಕೆ. ತಿಪ್ಪಣ್ಣ, ತಬಲ– ಜಿ.ಕೆ. ಮೌನೇಶ್, ಗಾಯನ– ಕೆ. ಮಲ್ಲನಗೌಡ, ಜಿ. ಮಲ್ಲಪ್ಪ, ಶರಣಬಸವ, ಬಿ. ಶಾರದಮ್ಮ, ಜಿ, ಸಂಗೀತ, ಜಿ. ನಾಗವೇಣಿರವರ ಹಿನ್ನೆಲೆಗಾಯನ ಗಮನ ಸೆಳೆಯಿತು.

ನಾಟಕಕ್ಕೆ ಬೆಳಕು– ಬಿ.ಎಂ.ಎಸ್. ಮೃತ್ಯುಂಜಯ, ಕಟ್ಟೆ ಉಮೇಶ್, ಧ್ವನಿ– ಹ್ಯಾಟಿ ಮಂಜುನಾಥ, ರಂಗಸಜ್ಜಿಕೆ– ಕೆ. ನಾಗೇಶ್, ರಂಗಪರಿಕರ– ಜಿ. ಸೋಮಣ್ಣ, ಪ್ರಸಾದನ ಪುಷ್ಪ ಪಿ. ಸರದಾರ, ವಸ್ತ್ರಲಂಕಾರ– ಪ್ರಕೃತಿ ಎನ್. ದೇನವಕೊಂಡ, ಸಿ.ಕೆ. ನಾಗರಾಜ ನಿರ್ವಹಿಸಿದರು.

## ಹ.ಬೊ.ಹಳ್ಳಿ ಪುರಸಭೆಯಲ್ಲಿ ಸಹಾಯಧನಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2025–26ನೇ ಸಾಲಿನ ಎಸ್.ಎಫ್.ಸಿ. ಯೋಜನೆ ಅಡಿಯಲ್ಲಿ ವ್ಯಕ್ತಿ ಸಂಬಂಧಿತ ಅನುಕೂಲಗಳಿಗೆ ಸಹಾಯ ಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹಗರಿಬೊಮ್ಮನಹಳ್ಳಿ ನಗರದ ಎಂ.ಬಿ.ಬಿ.ಎಸ್, ಬಿ.ಇ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ರೂ.3 ಲಕ್ಷ ರೂಪಾಯಿ, ಬಡಜನರಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು 2 ಲಕ್ಷ ರೂಪಾಯಿ ಹಾಗೂ ವಿದ್ಯಾರ್ಥಿಗಳಿಗೆ ಶೈಕ್ಷಣಿಕಗೆ 2.68 ಲಕ್ಷ ರೂಪಾಯಿಗಳ ಸಹಾಯಧಾನ ನೀಡಲಾಗುವುದು. ಪರಿಶಿಷ್ಟ ಪಂಗಡದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ರೂ.2 ಲಕ್ಷ ರೂಪಾಯಿ ಹಾಗೂ ವಿದ್ಯಾರ್ಥಿಗಳಿಗೆ ಶೈಕ್ಷಣಿಕಗೆ 1.20 ಲಕ್ಷ ರೂಪಾಯಿ ಸಹಾಯಧಾನ ನೀಡಲಾಗುವುದು. ಹಿಂದುಳಿದ ವರ್ಗದ ಲ್ಯಾಪ್‌ಟಾಪ್ ಖರೀದಿಗಾಗಿ ರೂ. 1.452 ಲಕ್ಷ ರೂಪಾಯಿ ಸಹಾಯ ಧನ ನೀಡಲಾಗುವುದು. ಪುರಸಭೆ ವ್ಯಾಪ್ತಿಯಲ್ಲಿ ಬರುವ ವಿಕಲಚೇತನರ ದಿವ್ಯಾಂಗಿ ರೋಗಿಗಳಿಗೆ ಶಸ್ತ್ರಚಿಕಿತ್ಸೆಗೆ 1.25 ಲಕ್ಷ ರೂಪಾಯಿ ಸಹಾಯ ಧನ ನೀಡಲಾಗುವುದು. ಅಂಗವಿಕಲರ ವ್ಯಾಸಂಗೇತರ ಚಟುವಟಿಕೆಗಳಗೆ 40 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡುವುದು. ವಿಕಲಚೇತನರ ಅಭಿವೃದ್ಧಿಗಾಗಿ ಶ್ರಮಿಸುವ ಸರ್ಕಾರೇತರ ಸಂಸ್ಥೆಗಳಿಗೆ 80 ಸಾವಿರ ರೂಪಾಯಿ ಸಹಾಯ ಧನ ನೀಡಲಾಗುವುದು. ಅರ್ಜಿ ಸಲ್ಲಿಸಲು ಫಲಾನುಭವಿಗಳು ಕುಟುಂಬದ ಜಾತಿ ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಬುಕ್, ಇತ್ತೀಚಿನ ನಾಲ್ಕು ಭಾವಚಿತ್ರಗಳು, ಶಿಕ್ಷಣಕ್ಕೆ ಪಸ್ತುತ 2025–26 ನೇ ಸಾಲಿನ ಶೈಕ್ಷಣಿಕ ವ್ಯಾಸಂಗ ಪ್ರಮಾಣ ಪತ್ರ, ಪ್ರವೇಶಾತಿ ಪಡೆದ ರಶೀದಿ, ಪ್ರತಿ ಅಂಕಪಟ್ಟಿಗಳು ಹಾಗೂ ತಾಲೂಕು ಸಮಾಜ ಕಲ್ಯಾಣ ಇಲಾಖೆ ಹಗರಿಬೊಮ್ಮನಹಳ್ಳಿ ಇವರಿಂದ 2025–26ನೇ ಸಾಲಿನಲ್ಲಿ ಶೈಕ್ಷಣಿಕ ಸಹಾಯಧನ ಪಡೆಯದಿರುವ ಬಗ್ಗೆ ದೃಢೀಕರಣ ಪತ್ರ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುವ ಫಲಾನುಭವಿಗಳು ನಿಗಧಿಪಡಿಸಿದ ವಿದ್ಯಾರ್ಹತೆಯ ಅಂಕಪಟ್ಟಿಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಅಂಗವಿಕಲರ ಕಲ್ಯಾಣ ಕಾರ್ಯಕ್ರಮದಡಿ ಅರ್ಜಿ ಸಲ್ಲಿಸುವ ಅಂಗವಿಕಲರು ಸಂಬಂಧಿಸಿದ ಅರ್ಜಿ ನಮೂನೆಯನ್ನು ಪುರಸಭೆ ಕಚೇರಿಯಲ್ಲಿ ಪಡೆದು ಸಲ್ಲಿಸತಕ್ಕದ್ದು, ಅರ್ಹ ಫಲಾನುಭವಿಗಳು ಜುಲೈ.14 ರೊಳಗಾಗಿ ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಕಚೇರಿ ವೇಳೆಯಲ್ಲಿ ಅರ್ಜಿ ಸಲ್ಲಿಸಬೇಕೆಂದು ಹಗರಿಬೊಮ್ಮನಹಳ್ಳಿ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ಪ್ರಧಾನಮಂತ್ರಿ ಅವಾಸ್ ಯೋಜನೆಗೆ ಅರ್ಜಿ ಅಹ್ವಾನ

**ಮೊದಲ ಪುಟದಿಂದ**

ವಲಸೆ ಬಂದ ಕುಟುಂಬದವರು ತಮ್ಮ ಅರ್ಜಿಗಳನ್ನು https://pmay-urban.gov.in ವೆಬ್‌ಸೈಟ್ ನಲ್ಲಿ ಸ್ವತಃ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಇದೇ ಜುಲೈ.15 ರೊಳಗಾಗಿ ಸಲ್ಲಿಸಿದ ದಾಖಲಾತಿಗಳನ್ನು ಪುರಸಭೆ ಕಾರ್ಯಾಲಯಕ್ಕೆ ಕಡ್ಡಾಯವಾಗಿ ನೀಡತಕ್ಕದ್ದು, ಅವಧಿ ಮೀರಿ ಬಂದಂತಹ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ಆಶ್ರಯ ಶಾಖೆಯ ಅಧಿಕಾರಿಗಳನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.







## ನಿವೃತ್ತಿ, ಪದೋನ್ನತಿ ಶಿಕ್ಷಕರಿಗೆ ಬೀಳ್ಕೊಡುಗೆ ಸನ್ಮಾನ



**■ ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಸರಕಾರಿ ಪ್ರೌಢಶಾಲೆ ಸೂಲದಹಳ್ಳಿ ಯಲ್ಲಿ ಸಮಾಜ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿಯಾದ ರವಿ.ಎನ್.ರವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ವೃತ್ತಿ ಶಿಕ್ಷಕ ಸೇವೆ ಸಲ್ಲಿಸಿ ವಿಜಯನಗರ ಜಿಲ್ಲೆಯ ಉಪನಿರ್ದೇಶಕರಕಛೇರಿಹೊಸಪೇಟೆಯಲ್ಲಿ ವಿಷಯ ಪರಿವೀಕ್ಷಕರಾಗಿ ಪದೋನ್ನತಿ ಹೊಂದಿದ ಕೆ.ಎಚ್. ಎಮ್.ವಿಶ್ವನಾಥರವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿ ಬೀಳ್ಕೊಡ ಲಾಯಿತು.

ಮುಖ್ಯ ಗುರುಗಳಾದ ಡಿ.ಬೋರಯ್ಯ ಈ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಶಿಕ್ಷಕ ರಾದ ಖಲೀಲ್ ಸಾಹೇಬ್, ಷಡಕ್ಷರಿಗೌಡ, ಹರೀಶ ಗೌಡ, ಹೇಮಂತ, ಬಸವರಾಜ, ಹಾಸ್ಟೆಲ್ ಬಸವರಾಜ, ಲೀಲಾ ರವಿ, ಎನ್ ಉಪಸ್ಥಿತರಿದ್ದರು. ಶ್ರೀಮಧು. ಕೆ.ನಿರೂಪಿಸಿದರು. ರೇವಣಾರಾಧ್ಯ ಸ್ವಾಗತಿಸಿದರು. ಕೆ.ವಿಶ್ವನಾಥ ವಂದಿಸಿದರು.